ಕಾಮ್ ನ್ಯೂಸ್

CAM NEWS

19-20 ● ಸೆಪ್ಟೆಂಬರ್ 2009

# ಬೆಂಗಳಿಗೆ ಬನ್ನಿ

"ಸಹಬಾಳ್ವೆ ನಮ್ಮೂರ ಜನರಲ್ಲಿ ರಕ್ತಗತವಾಗಿದೆ," ಬೆಂಗಳೆಯ ನೆಹರೂ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾದ ದಿನೇಶ ಹೆಗಡೆ ಹೇಳುತ್ತಿದ್ದರೆ ಕೃಷಿಕ ವೆಂಕಟೇಶ ಹೆಗಡೆ ದನಿಗೂಡಿಸುತ್ತಾರೆ, "ನಮ್ಮೂರಲ್ಲಿ ಈ ತನಕ ಕಳ್ಳತನದ ಪ್ರಕರಣವಾಗಿಲ್ಲ, ಜಾತಿ ಸಂಘರ್ಷ ಇಲ್ಲವೇ ಇಲ್ಲ. ನಮ್ಮ ನಮ್ಮ ನಡುವೆ ಏನೇ ಮನಸ್ತಾಪ ಬಂದರೂ ಊರ ಬದಿಯ ಅರಳಿಕಟ್ಟೆಯಲ್ಲಿ ಪರಿಹರಿಸಲಾಗುತ್ತದೆ." ಬೆಂಗಳೆ ಗ್ರಾಮಸ್ಥರ ಸಹಜೀವನ ಎಲ್ಲರಿಗೂ ಮಾದರಿ. ಶತಮಾನದಷ್ಟು ಹಳೆಯ ಅರಳಿಕಟ್ಟೆ ಊರ ಸಾಮರಸ್ಯದ ಸಂಕೇತ. ಹಿರಿ-ಕಿರಿಯರು, ಎಲ್ಲಾ ಪಂಗಡದವರು ತಮ್ಮ ಸಮಸ್ಯೆಗಳನ್ನು ಅಲ್ಲಿ ಇತರರ ಜತೆ ಹಂಚಿಕೊಳ್ಳುತ್ತಾರೆ; ಪರಸ್ಪರ ಗೌರವದಿಂದ ಪರಿಹಾರ ಕಂಡುಕೊಳ್ಳುತ್ತಾರೆ. ಜಗಳ, ದೊಂಬಿ, ಗಲಾಟೆ, ಅವಕಾಶವಾದಿ ರಾಜಕೀಯಗಳಿಂದ ದೂರವಿದ್ದು ಪರಸ್ಪರ ತಿಳಿವು, ಸಹಕಾರದಿಂದ ನೆಮ್ಮದಿಯ ಬದುಕು ಸಾಗಿಸುತ್ತಿದ್ದಾರೆ. ಬೆಂಗಳೆ-ಓಣಿಕೇರಿ-ಹುಲೇಮಳಗಿ ಸೇರಿ ಬೆಂಗಳೆ ಗ್ರಾಮದ ಜನಸಂಖ್ಯೆ ಸುಮಾರು 2000.

ಕೃಷಿ ಮುಖ್ಯ ಕಸುಬು. ಅಡಿಕೆ ಜೊತೆಗೆ ತೆಂಗು, ಬಾಳೆ ಪ್ರಮುಖ ಬೆಳೆಗಳು. ಇಲ್ಲಿನ ಮಂಟಗಾಲ ಬೆಲ್ಲ ರುಚಿ-ಗುಣಮಟ್ಟಕ್ಕೆ ಪ್ರಸಿದ್ಧ. ಕಳೆದ 15 ವರ್ಷಗಳಿಂದೀಚೆಗೆ ಭತ್ತದ ಗದ್ದೆಗಳು ಶುಂಠಿ ಕೃಷಿಗಾಗಿ ಬಳಕೆಯಾಗುತ್ತಿವೆ. ಅನಾನಸು ಈ ಭಾಗಕ್ಕೆ ಪರಿಚಯವಾಗಿ 45 ವರ್ಷಗಳಾದವು.

ಈ ಜಲ ಸ್ವಾವಲಂಬಿ ಗ್ರಾಮದಲ್ಲಿ ಒಟ್ಟು ಒಂಬತ್ತು ಕೆರೆಗಳಿವೆ. ಅಡಿಕೆ ಪತ್ರಿಕೆಯ 'ನೆಲ ಜಲ ಉಳಿಸುವ ನೂರು ವಿಧಿ' ಪ್ರೇರಣೆಯಿಂದ ಊರಿಗೆ ಊರೇ ಜಲಕೊಯ್ಲು ಆರಂಭಿಸಿದ ಅಪರೂಪದ ನಿದರ್ಶನ ಇಲ್ಲಿದೆ. ಕಳೆದ ಹಲವು ವರ್ಷಗಳಿಂದ ಗ್ರಾಮಸ್ಥರು ಒಗ್ಗೂಡಿ ನೆಲ-ಜಲ ಸಂರಕ್ಷಣೆ ಸೇರಿದಂತೆ ಅನೇಕ ಕಾರ್ಯಕ್ರಮಗಳನ್ನು ನಿರಂತರ ಮಾಡುತ್ತಾ ಬಂದಿದ್ದಾರೆ. ಊರಿನವರೇ ಸೇರಿ 30 ವರ್ಷದ ಹಿಂದೆ ಆರಂಭಿಸಿದ ಲಕ್ಷ್ಮೀನರಸಿಂಹ ವಾಚನಾಲಯದಲ್ಲಿ ಸುಮಾರು 4000 ಪುಸ್ತಕಗಳಿವೆ. ಅಂಗನವಾಡಿ ಸೇರಿದಂತೆ ಶತಮಾನ ಕಂಡ ಪ್ರಾಥಮಿಕ ಶಾಲೆ ಹಾಗೂ 45 ವರ್ಷಗಳ ಹಿಂದೆ ಸ್ಥಾಪಿಸಲ್ಪಟ್ಟ ಪ್ರೌಢಶಾಲೆ ಬೆಂಗಳೆಯಲ್ಲಿ ಇವೆ.

ಈ ಊರಿನ ಹಿರಿಯ ಕೃಷಿಕ ವಾಸುದೇವ ಹೆಗಡೆ ಅವರು ಕೃಷಿಯಲ್ಲಿ ಪ್ರಯೋಗಶೀಲರು. ಯುವ ಪೀಳಿಗೆಗೆ ಸ್ವಾವಲಂಬನೆಯ ಪಾಠ ಮಾಡಿದವರು. ಅವರು ಈ ಬಾರಿಯ ಕೃಷಿಪತ್ರಿಕೋದ್ಯಮ ಪ್ರಶಸ್ತಿ ಪ್ರದಾನ ಮಾಡಲು ಪ್ರೀತಿಯಿಂದ ಒಪ್ಪಿಕೊಂಡಿದ್ದಾರೆ.

ಪ್ರತಿವರ್ಷ ಒಂದು ಸಮಾಜಮುಖಿ ಕಾರ್ಯಕ್ರಮವನ್ನು ಸಂಘಟಿಸುವ ಊರಿನವರು ಈ ಬಾರಿ ಕೇಂದ್ರದ ಕಾರ್ಯಾಗಾರವನ್ನು ಹಮ್ಮಿಕೊಳ್ಳಲು ಅಭಿಮಾನದಿಂದ ಅವಕಾಶ ಮಾಡಿಕೊಟ್ಟಿದ್ದಾರೆ. ಬೆಂಗಳೆಯ ಕೃಷಿಕ ಪ್ರಸನ್ನ ಹೆಗಡೆ ಅವರ ಮನೆಯಲ್ಲಿ ಕಾರ್ಯಾಗಾರ ನಡೆಯುತ್ತದೆ. ಗ್ರಾಮ ಜೀವನಕ್ಕೆ ಬೆಳಕೊಡ್ಡುವಂತೆ ಕೃಷಿಕರ ಮನೆಗಳಲ್ಲೇ ವಾಸ್ತವ್ಯ. ಊಟ ವಸತಿಯ ವ್ಯವಸ್ಥೆಯ ಮೇಲುಸ್ತುವಾರಿಯನ್ನು ದಿನೇಶ ಹೆಗಡೆ, ಮಹೇಂದ್ರ ಹೆಗಡೆ, ರವಿ ಹೆಗಡೆ, ಶ್ರೀನಿವಾಸ ಹೆಗಡೆ, ಬೆಂಗಳೆ ವೆಂಕಟೇಶ ಮುಂತಾದವರು ನೋಡಿಕೊಳ್ಳುತ್ತಿದ್ದಾರೆ. ಕೃಷಿ-ಪತ್ರಿಕೋದ್ಯಮ ತರಬೇತಿ ಕೃಷಿಕರ ಜೊತೆಗಿನ ಒಡನಾಟದಿಂದಲೇ ಆರಂಭವಾದರೆ ಅರ್ಥಪೂರ್ಣವಾದೀತು ಎಂಬುದು ನಮ್ಮ ನಂಬುಗೆ. ಹಳ್ಳಿಯ ಆತ್ಮೀಯ ವಾತಾವರಣ ಎಲ್ಲರಲ್ಲಿ ಹೊಸ ಹುಮ್ಮಸ್ಸು ಮೂಡಿಸೀತು ಎಂದು ಭಾವಿಸಿದ್ದೇವೆ.

– ಅನಿತಾ ಪೈಲೂರು

ಬೆಂಗಳೆ-ಓಣಿಕೇರಿ-ಹುಲೇಮಳಗಿ ಊರವರ ಆಶ್ರಯದಲ್ಲಿ

## ಕೃಷಿ ಮಾಧ್ಯಮ ಕೇಂದ್ರದ 9ನೇ ವಾರ್ಷಿಕೋತ್ಸವ

- ರಾಜ್ಯಮಟ್ಟದ ಕೃಷಿಪತ್ರಿಕೋದ್ಯಮ ಪ್ರಶಸ್ತಿ ಪ್ರದಾನ
- 'ಕಾಮ್ ಫೆಲೋ' ಪ್ರಮಾಣಪತ್ರ ವಿತರಣೆ
- ಈರಯ್ಯ ಕಿಲ್ಲೇದಾರ ಅವರ 'ಸಾವಯವದ ಹಾದಿ' ಹಾಗೂ ನಾ. ಕಾರಂತ ಪೆರಾಜೆ ಅವರ 'ಕಾಡು ಮಾವು' ಪುಸ್ತಕಗಳ ಬಿಡುಗಡೆ

ದಿನಾಂಕ : ಅಕ್ಟೋಬರ್ 25, 2009
ಸಮಯ : ಬೆಳಗ್ಗೆ 11.15
ಸ್ಥಳ : ಬೆಂಗಳೆ, ಶಿರಸಿ ತಾಲೂಕು, ಉತ್ತರ ಕನ್ನಡ ಜಿಲ್ಲೆ

ನಮ್ಮೊಂದಿಗೆ –

**ವಾಸುದೇವ ವೆಂ. ಹೆಗಡೆ**
ಹಿರಿಯ ಕೃಷಿಕರು, ಹುಲೇಮಳಗಿ

**ನಾಗೇಶ ಹೆಗಡೆ**
ಹಿರಿಯ ಪತ್ರಕರ್ತರು, ಬೆಂಗಳೂರು

ಹಾಗೂ

**ಶ್ರೀ ಪಡ್ರೆ**
ಕಾರ್ಯನಿರ್ವಾಹಕ ಸಂಪಾದಕರು, ಅಡಿಕೆ ಪತ್ರಿಕೆ

ಬನ್ನಿ, ನಿಮಗೆ ಪ್ರೀತಿಯ ಸ್ವಾಗತ.

ಶಿಬಿರದ ಸಂಪನ್ಮೂಲ ವ್ಯಕ್ತಿಗಳು:

- ಹೆಚ್.ಎನ್. ಆನಂದ
- ಶ್ರೀ ಪಡ್ರೆ
- ಶಿವಾನಂದ ಕಳವೆ
- ಜಿ. ಕೃಷ್ಣಪ್ರಸಾದ್
- ಗಾಣಧಾಳು ಶ್ರೀಕಂಠ
- ಪೂರ್ಣಪ್ರಜ್ಞ ಬೇಳೂರು
- ಅನಿತಾ ಪೈಲೂರು
- ನಾಗೇಶ ಹೆಗಡೆ
- ಅಡ್ಡೂರು ಕೃಷ್ಣರಾವ್
- ಸತ್ಯಾ ಎಸ್.
- ಮಲ್ಲಿಕಾರ್ಜುನ ಹೊಸಪಾಳ್ಯ
- ಆನಂದತೀರ್ಥ ಪ್ಯಾಟಿ
- ಶಿವರಾಂ ಪೈಲೂರು



ಬೆಂಗಳೆ ಕೆರೆ

## ಬೆಂಗಳಗೆ ಮಾರ್ಗಸೂಚಿ

ಶಿರಸಿ ಹಳೆ ಬಸ್ ಸ್ಟಾಂಡ್‌ನಿಂದ ಬೆಳಗ್ಗೆ 7, ಮಧ್ಯಾಹ್ನ 1 ಹಾಗೂ ಸಾಯಂಕಾಲ 5.15ಕ್ಕೆ ಬೆಂಗಳಗೆ ಬಸ್ ಸೌಕರ್ಯ ಇದೆ. ಸದ್ಯದ ಬಸ್ ದರ ರೂ. 14. ಈ ಬಸ್‌ನಲ್ಲಿ ಬಂದರೆ ಬೆಂಗ್ಳೆ ರಾಮೇಶ್ವರ ದೇವಸ್ಥಾನ ಕೊನೆಯ ಸ್ಟಾಪ್. ಅಲ್ಲಿ ಇಳಿಯಬೇಕು. ದೇವಸ್ಥಾನದ ಎಡಮಗ್ಗುಲಿಗೆ ಇರುವುದೇ ಶಿಬಿರ ನಡೆಯುವ ಪ್ರಸನ್ನ ಹೆಗಡೆ ಅವರ ಮನೆ. ಹೊರ ಊರಿನಿಂದ ಶಿರಸಿಗೆ ಬರುವ ಬಸ್‌ಗಳೆಲ್ಲ ಹಳೆ ಬಸ್ ಸ್ಟಾಂಡ್‌ಗೆ ಬರುತ್ತವೆ. ರಾತ್ರಿ ಬಸ್‌ನಲ್ಲಿ ಶಿರಸಿಗೆ ಬರುವವರು ಟಿಕೆಟ್ ಕಾಯ್ದಿರಿಸುವಾಗ ಬೆಳಗ್ಗೆ 6.30 ಒಳಗೆ ತಲುಪುವಂತಹ ಬಸ್‌ಗೆ ಆದ್ಯತೆ ಕೊಡಿ. ಬೆಂಗಳಗೆ ಬೆಳಗ್ಗೆ ಹೊರಡುವ ಬಸ್ ಸಿಕ್ಕರೆ ಪ್ರಯಾಣ ಸುಗಮ. ಹೊಸ ಬಸ್ ಸ್ಟಾಂಡ್‌ನಿಂದ ಹಳೆ ಬಸ್ ಸ್ಟಾಂಡ್‌ಗೆ ರಿಕ್ಷಾ ಸೌಕರ್ಯ ಇದೆ.

ಶಿರಸಿಯಿಂದ ಬನವಾಸಿಗೆ ಅರ್ಧ ಗಂಟೆಗೊಂದರಂತೆ ಬಸ್ ಇದೆ. ಆ ಬಸ್‌ನಲ್ಲಿ ನವಣಗೇರಿ ಕ್ರಾಸ್‌ಗೆ ಬಂದರೆ ಅಲ್ಲಿಂದ ಬೆಂಗಳ 5 ಕಿಲೋಮೀಟರ್. ನವಣಗೇರಿ ಕ್ರಾಸ್‌ನಿಂದ ಬೆಂಗಳ-ಓಣಿಕೇರಿಗೆ ಬಾಡಿಗೆ ಬೈಕ್‌ಗಳು ಸಿಗುತ್ತವೆ(ರೂ.25). ಬೆಂಗಳಯಲ್ಲಿ ಬಾಡಿಗೆಗೆ ಓಡಿಸುವ ಮಾರುತಿ ವ್ಯಾನ್ (ಶ್ರೀನಿವಾಸ ಹೆಗಡೆ: 08384–284280) ಲಭ್ಯವಿದೆ. ಅಭ್ಯರ್ಥಿಗಳು ಮೊದಲೇ ಮಾತನಾಡಿ ಶ್ರೀನಿವಾಸ ಹೆಗಡೆ ಅವರನ್ನು ಸಂಪರ್ಕಿಸಿ ನವಣಗೇರಿ ಕ್ರಾಸ್‌ನಿಂದ ಜೊತೆಯಾಗಿ ಬರಬಹುದು. ಬನವಾಸಿಯಿಂದಲೂ (ಐದು ಕಿಲೋಮೀಟರ್ ದೂರ) ಬೆಂಗಳಗೆ ಬಾಡಿಗೆಗೆ ವ್ಯಾನ್ ಅಥವಾ ಬೈಕ್ ಸಿಗುತ್ತವೆ. ವ್ಯಾನ್ ಅಥವಾ ಬೈಕ್‌ನಲ್ಲಿ ಬಂದರೆ ಬೆಂಗ್ಳೆ ರಾಮೇಶ್ವರ ದೇವಸ್ಥಾನ ಲ್ಯಾಂಡ್ ಮಾರ್ಕ್. ಹುಲೇಮಳಗಿ–ಓಣಿಕೇರಿ–ಬೆಂಗಳಯ ಮಧ್ಯೆ ಸುಮಾರು ಮೂರು ಕಿಲೋಮೀಟರ್‌ನಷ್ಟು ಉದ್ದದ ರಸ್ತೆ ಸರಳರೇಖೆಯಲ್ಲಿ ಹಾದು ಹೋಗುತ್ತದೆ. ಶಿಬಿರ ನಡೆಯುವ ಸ್ಥಳ ರಸ್ತೆಯ ಕೊನೆಯಲ್ಲಿದೆ.

ಆಯೋಜಕರ ದೂರವಾಣಿ ಸಂಖ್ಯೆಗಳು: ಪ್ರಸನ್ನ ಹೆಗಡೆ – 9886537570; 08384 – 284107
ಮಹೇಂದ್ರ ಹೆಗಡೆ – 9379079291; 08384 – 284108
ವೆಂಕಟೇಶ ಹೆಗಡೆ – 08384 – 247147




## ನಾಗೇಂದ್ರ ಸಾಗರ್ ಅವರಿಗೆ ಕೃಷಿಪತ್ರಿಕೋದ್ಯಮ ಪ್ರಶಸ್ತಿ



ಕೃಷಿ ಮಾಧ್ಯಮ ಕೇಂದ್ರ ಸ್ಥಾಪಿಸಿರುವ ರಾಜ್ಯಮಟ್ಟದ ಕೃಷಿಪತ್ರಿಕೋದ್ಯಮ ಪ್ರಶಸ್ತಿಗೆ 2009ನೇ ಸಾಲಿಗಾಗಿ ಶಿವಮೊಗ್ಗ ಜಿಲ್ಲೆ ಸಾಗರ ತಾಲೂಕು ಚಿಪ್ಪಳಿಯ ನಾಗೇಂದ್ರ ಸಾಗರ್ ಅವರು ಆಯ್ಕೆಯಾಗಿದ್ದಾರೆ.

ಕನ್ನಡದಲ್ಲಿ ಅರ್ಥಪೂರ್ಣ ಕೃಷಿಪತ್ರಿಕೋದ್ಯಮಕ್ಕೆ ಉತ್ತೇಜನ ನೀಡುವುದಕ್ಕಾಗಿ ಕೇಂದ್ರ ಕಳೆದ ಎಂಟು ವರ್ಷಗಳಿಂದ ಕೃಷಿಕರೇ ಬರೆದ ಲೇಖನ ಮತ್ತು ಮುಕ್ತ ವಿಭಾಗ ಹೀಗೆ ಎರಡು ವಿಭಾಗಗಳಲ್ಲಿ ಪ್ರಶಸ್ತಿ ನೀಡುತ್ತಿದೆ. ಇದುವರೆಗೆ ಮುಕ್ತ ವಿಭಾಗದಲ್ಲಿ ಆರ್.ಎಸ್. ಪಾಟೀಲ, ಜಿ. ಕೃಷ್ಣಪ್ರಸಾದ್, ಎನ್.ವಿ. ಕರುಣಾಕರ, ನಾ. ಕಾರಂತ, ಮಲ್ಲಿಕಾರ್ಜುನ ಹೊಸಪಾಳ್ಯ, ವಿ. ಗಾಯತ್ರಿ, ಗಾಣಧಾಳು ಶ್ರೀಕಂಠ, ರವಿಶಂಕರ ದೊಡ್ಡಮಾಣಿ, ಗಿರೀಶ್ ಹೆಚ್.ಸಿ. ಮತ್ತು ಕಿಶನ್‌ರಾವ್ ಕುಲಕರ್ಣಿ ಹಾಗೂ ಕೃಷಿಕರ ವಿಭಾಗದಲ್ಲಿ ಚಂದ್ರಶೇಖರ ಏತಡ್ಕ, ಪಡಾರು ರಾಮಕೃಷ್ಣ ಶಾಸ್ತ್ರಿ, ಡಿ.ಡಿ. ಭರಮಗೌಡ್ರ, ಬಿ.ಎನ್. ನಂದೀಶ್, ಸುಬ್ರಹ್ಮಣ್ಯ ಎಮ್. ಹೆಗಡೆ, ಬೆಂಗಳ ವೆಂಕಟೇಶ, ಬಾಲಚಂದ್ರ ಹೆಗಡೆ ಸಾಯಿಮನೆ ಮತ್ತು ಈರಯ್ಯ ಕಿಲ್ಲೇದಾರ ಪ್ರಶಸ್ತಿ ಪಡೆದಿದ್ದಾರೆ.

ಈ ಬಾರಿ ಎರಡೂ ವಿಭಾಗಗಳನ್ನೂ ಸೇರಿಸಿ ಒಂದೇ ಪ್ರಶಸ್ತಿ ನೀಡುತ್ತಿದ್ದೇವೆ. ನಾಗೇಂದ್ರ ಸಾಗರ್ ಅವರು ಬರೆದ 'ಪರಿ ಇಳಿಸಿದ ರಸಾವರಿ' (ಅಡಿಕೆ ಪತ್ರಿಕೆ: ಜೂನ್, 2009) ಲೇಖನ ಕೃಷಿಪತ್ರಿಕೋದ್ಯಮ ಪ್ರಶಸ್ತಿಗಾಗಿ ಆಯ್ಕೆಯಾಗಿದೆ. ಪ್ರಶಸ್ತಿ ಎರಡು ಸಾವಿರ ರೂಪಾಯಿ ನಗದು ಪುರಸ್ಕಾರ, ಪರಿಸರ ಶಿಲ್ಪ ಹಾಗೂ ಪ್ರಶಸ್ತಿ ಪತ್ರವನ್ನು ಒಳಗೊಂಡಿದೆ

### ಕ್ರಿಯಾಶೀಲ ಕೃಷಿಕ

44 ವರ್ಷ. ವಿಜ್ಞಾನ ಪದವಿಯ ಬಳಿಕ ಕೆಲಕಾಲ ಮಂಗಳೂರು ಹಾಗೂ ಬೆಂಗಳೂರಿನಲ್ಲಿ ವಿವಿಧ ದಿನಪತ್ರಿಕೆ, ವಾರಪತ್ರಿಕೆಗಳಲ್ಲಿ ವರದಿಗಾರ, ಅಂಕಣಕಾರನಾಗಿ ಅನುಭವ. ಕೃಷಿಯ ಕಡೆಗಿನ ತುಡಿತದಿಂದ ಮರಳಿ ಊರಿನತ್ತ ಪಯಣ. ಸ್ನಾತಕೋತ್ತರ ಪದವೀಧರೆ ಸಂಗಾತಿ ವಾಣಿಶ್ರೀ ಜೊತೆಗೂಡಿ ಕೃಷಿ ಬದುಕಿನ ವಿವಿಧ ಆಯಾಮಗಳನ್ನು ಅರಿಯುವ ಯತ್ನ. ಅನುಭವಿ ಕೃಷಿಕರ ಒಡನಾಟದಿಂದ ಕೃಷಿಯ ಒಳಹೊರಗಿನ ಪರಿಚಯ. ತೋಟಗಾರಿಕೆ, ಪುಷ್ಪಕೃಷಿ, ತರಕಾರಿ ಕೃಷಿ, ಹೈನುಗಾರಿಕೆ, ಜೇನು ಸಾಕಣೆ, ಎರೆಗೊಬ್ಬರ–ಜೀವಾಣು ಗೊಬ್ಬರ ತಯಾರಿ, ಸುಗಂಧದ್ರವ್ಯ ಸಂಸ್ಕರಣಾ ಘಟಕ – ಹೀಗೆ ಹಲವು ಚಟುವಟಿಕೆ.

ಸಂಘಟನಾತ್ಮಕ ಕಾರ್ಯಗಳಲ್ಲೂ ಕ್ರಿಯಾಶೀಲ. ಕೃಷಿ ಸಂಬಂಧಿ ವಿಚಾರಸಂಕಿರಣ, ಕಾರ್ಯಾಗಾರಗಳ ಆಯೋಜಕ. ಸರಕಾರಿ ಇಲಾಖೆಗಳು, ಬ್ಯಾಂಕಿಂಗ್ ಸಂಸ್ಥೆಗಳು ಹಾಗೂ ರೈತರ ನಡುವೆ ಸಂಪರ್ಕ ಸೇತುವಾಗಿ ಕೆಲಸ ಮಾಡುತ್ತಿರುವ 'ರೈತಾಪಿ' ಫಾರ್ಮರ್ಸ್ ಕ್ಲಬ್‌ನ ಸಂಚಾಲಕ. ಸಾಗರ ಜೇನುಕೃಷಿ ಮತ್ತು ಕೈಗಾರಿಕಾ ಸಹಕಾರ ಸಂಘದ ಅಧ್ಯಕ್ಷ.

ಕೃಷಿ ಹಾಗೂ ಗ್ರಾಮೀಣಾಭಿವೃದ್ಧಿ ಕುರಿತ ಬರವಣಿಗೆಯಲ್ಲಿ ತೀವ್ರ ಆಸಕ್ತಿ. ಕಳೆದ ಹಲವು ವರ್ಷಗಳಿಂದ ಅನುಭವ ಆಧಾರಿತ ಬರಹಗಳು ವಿವಿಧ ಪತ್ರಿಕೆಗಳಲ್ಲಿ ಪ್ರಕಟ.

ವಿಳಾಸ : ನಾಗೇಂದ್ರ ಸಾಗರ್
ಚಿತ್ರಕೂಟ, ಚಿಪ್ಪಳಿ, ಅಂಚೆ: ವರದಾಮೂಲ
ಸಾಗರ ತಾಲೂಕು – 577 417 ಶಿವಮೊಗ್ಗ ಜಿಲ್ಲೆ
ದೂರವಾಣಿ: 08183–228048; 9449501613

# ಕಾಮ್ ಫೆಲೋಗಳು – 2009

ಕಳೆದ ವರ್ಷ ಕೋರ್ಸಿಗೆ ಸೇರಿದವರು 33 ಮಂದಿ. ತರಬೇತಿಯ ಕೊನೆಗೆ ಯಶಸ್ವಿಯಾಗಿ ದಡ ಸೇರಿದವರು 15 ಮಂದಿ. ಇವರಿಗೆ ಅಕ್ಟೋಬರ್ 25ರಂದು ಕಾಮ್ ಫೆಲೋ ಗೌರವ ಪ್ರದಾನ. ಕೆಲವರಲ್ಲಿ ಆರಂಭದಲ್ಲಿ ಇದ್ದ ಉತ್ಸಾಹ ಬರಬರುತ್ತಾ ಕ್ಷೀಣವಾಗುತ್ತಾ ಬಂತು. ಅಭ್ಯರ್ಥಿಗಳು ಸಂದೇಹ ನಿವಾರಣೆಗಾಗಿ ಪ್ರಶ್ನಿಸಿ ಫೋನ್ ಮಾಡುತ್ತಾರೆ ಎಂಬ ನಿರೀಕ್ಷೆ ಸುಳ್ಳಾಗಿ 'ಅಸೈನ್‌ಮೆಂಟ್ ಬಂದಿಲ್ಲ' ಎಂದು ನಾವೇ ಮತ್ತೆಮತ್ತೆ ಫೋನ್ ಮಾಡಿ ನೆನಪಿಸುವಂತಾಯಿತು! ಆದರೆ ಇದಕ್ಕೆ ಅಪವಾದವೂ ಇದೆ. ಸಲಹೆಗಾಗಿ ಫೋನ್ ಮಾಡಿದವರು, ಲೇಖನವನ್ನು ಸೂಕ್ತ ರೀತಿಯಲ್ಲಿ ಪರಿಷ್ಕರಿಸಿ ಪ್ರಕಟಣೆಗೆ ಕಳುಹಿಸಿದವರು, ಲೇಖನ ಪ್ರಕಟವಾಗಿದೆ ಎಂದು ಸಂತಸ ಹಂಚಿಕೊಂಡವರು, ಈಮೇಲ್ ಸಮರ್ಥವಾಗಿ ಬಳಸಿಕೊಂಡವರು ಅಭ್ಯರ್ಥಿಗಳ ಬಳಗದಲ್ಲಿ ಇದ್ದಾರೆ. ಅವರೆಲ್ಲ 'ಕಾಮ್ ಫೆಲೋ' ಪ್ರಮಾಣ ಪತ್ರ ಸ್ವೀಕರಿಸಲಿದ್ದಾರೆ. ಇವರು ಹೊಸ ತಂಡಕ್ಕೆ ಸ್ಫೂರ್ತಿ ನೀಡಲಿ ಎಂದು ಆಶಿಸುತ್ತೇವೆ.

ಅತ್ಯುತ್ತಮ ಸಾಧನೆ ಪ್ರಶಸ್ತಿಯನ್ನು ಈ ಬಾರಿ ಇಬ್ಬರು ಹಂಚಿಕೊಂಡಿದ್ದಾರೆ. ಅವರೆಂದರೆ ಹಾಸನ ಜಿಲ್ಲೆ ಕಾನಹಳ್ಳಿಯ ಗೃಹಿಣಿ ಕೆ.ಎಸ್. ಪೂರ್ಣಿಮ ಹಾಗೂ ಹಾರೋಹಳ್ಳಿಯ ಕೃಷಿಕ ಜಿ. ಗಣಪತಿ ಭಟ್. ಪೂರ್ಣಿಮ ಲೇಖನ ಬರೆಯಲು ಆರಂಭಿಸಿದ್ದು ತರಬೇತಿಗೆ ಸೇರಿದ ಮೇಲೆ. ಹೊಸಹಳ್ಳಿಯ ಪ್ರಾಥಮಿಕ ಶಿಬಿರ ಮುಗಿಸಿ ಮನೆಗೆ ಹೋದವರು ಅದೇ ಗುಂಗಲ್ಲಿ ಒಂದು ಲೇಖನ ಬರೆದರು. ಅದು ಪ್ರಜಾವಾಣಿಯ ಕೃಷಿ ಪುರವಣಿಯಲ್ಲಿ ಪ್ರಕಟವೂ ಆಯಿತು. ಅಚ್ಚುಕಟ್ಟಾಗಿ ಅಸೈನ್‌ಮೆಂಟ್ ಕಳುಹಿಸುತ್ತಿದ್ದ ಅವರು ತರಬೇತಿಯ ಕೊನೆಯ ವರೆಗೂ ಅದೇ ಉತ್ಸಾಹವನ್ನು ಉಳಿಸಿಕೊಂಡಿದ್ದರು. ಗಣಪತಿ ಭಟ್ ಮಾಹಿತಿ ಸಂಗ್ರಹಣೆಯಲ್ಲಿ ತೋರುತ್ತಿದ್ದ ಪರಿಶ್ರಮ ಅವರ ಲೇಖನಗಳಲ್ಲಿ ವ್ಯಕ್ತವಾಗುತ್ತಿತ್ತು. ಅವರು ಲೇಖನಗಳಿಗೆ ಆಯ್ಕೆ ಮಾಡುತ್ತಿದ್ದ ವಿಷಯಗಳೂ ಹೊಸದಾಗಿರುತ್ತಿದ್ದವು. ತರಬೇತಿಯ ಅವಧಿಯಲ್ಲಿ ಅವರು ಬಹುತೇಕ ಎಲ್ಲ ಸಂಪನ್ಮೂಲ ವ್ಯಕ್ತಿಗಳನ್ನು ಸಂಪರ್ಕಿಸಿ ಅಗತ್ಯ ಮಾರ್ಗದರ್ಶನ ಪಡೆದಿದ್ದಾರೆ.

## ಈ ಬಾರಿಯ ಕಾಮ್ ಫೆಲೋಗಳು


ಜಿ. ಗಣಪತಿ ಭಟ್


ಕೆ.ಎಸ್. ಪೂರ್ಣಿಮ


ಲೀಲಾ ನಾ. ಕೌಜಗೇರಿ


ಲಿಂಗರಾಜ ವಿ. ರಾಮಾಪುರ


ಡಾ. ಅಶ್ವಿನಿ ಕೃಷ್ಣಮೂರ್ತಿ


ಶ್ರೀಲತ ಕೆ.ಎನ್.


ಸಹನಾ ಕಾಂತಬೈಲು


ಎ. ಎಲ್. ಜಯರಾಮು


ಮಂಜುನಾಥ ಎಚ್.


ಬಿ. ರಾಜು ಸ್ಟೀವನ್ ಕ್ರಾಸ್ತಾ


ಗಣಪತಿ ವಿ. ಹೆಗಡೆ


ಎಮ್.ಜೆ. ದಿನೇಶ್


ರವಿ ಆರ್. ವಿಶ್ವನಾಥಪುರ


ಸರಸ್ವತಿ ಬಿ. ಧರೆಣ್ಣಿ


ಶಾರದಾ ಜಿ. ಪಾಟೀಲ

---

## ಅಡಿಕೆ ಪತ್ರಿಕೆ ಬಹುಮಾನ

ಡಿಸೆಂಬರ್ 2008ರಿಂದ ಸೆಪ್ಟೆಂಬರ್ 2009ರ ಅವಧಿಯಲ್ಲಿ ಅಡಿಕೆ ಪತ್ರಿಕೆಯಲ್ಲಿ ಪ್ರಕಟಗೊಂಡ ಕಾಮ್ ಬಳಗದವರ (ಫೆಲೋಗಳು ಹಾಗೂ ಅಭ್ಯರ್ಥಿಗಳು) 10 ಉತ್ತಮ ಲೇಖನಗಳಿಗೆ ಬಹುಮಾನ ನೀಡಲಾಗುವುದೆಂದು ಪ್ರಕಟಿಸಿದ್ದೆವು. ಆದರೆ ನಿರೀಕ್ಷಿಸಿದಷ್ಟು ಸಂಖ್ಯೆಯಲ್ಲಿ ಲೇಖನಗಳು ಪ್ರಕಟಗೊಳ್ಳದ ಕಾರಣ ಕೇವಲ ಐದು ಲೇಖನಗಳನ್ನು ಬಹುಮಾನಕ್ಕಾಗಿ ಆಯ್ಕೆ ಮಾಡಿದ್ದೇವೆ. ವಿವರ ಹೀಗಿದೆ:

1. ಮಾರುಕಟ್ಟೆಯ ಹಂಗಿಲ್ಲ, ಮಧ್ಯವರ್ತಿಯದೂ – ಲೀಲಾ ನಾ. ಕೌಜಗೇರಿ
2. ಮೌಲ್ಯವರ್ಧನೆಯಿಂದ ಉಳಿದುಕೊಂಡ ನೆಲ್ಲಿ ಕೃಷಿ – ಸರಸ್ವತಿ ಬಿ. ಧರೆಣ್ಣಿ
3. ಮುಯ್ಯಿ ಸಾಲಿನ ಸಹಕಾರಿ ಕೃಷಿ – ಜಿ. ಗಣಪತಿ ಭಟ್
4. 'ಕೋಕೊ ಮಿಲ್ಕ್ ಪಾರ್ಲರ್' ಗೆ ಇನ್ನು ಇಳಿಲೆಕ್ಕ – ಕೆ. ರೇಖಾ ಸಂಪತ್
5. ಮೌಲ್ಯವರ್ಧನೆ ಇವರಿಗೆ ಅನಿವಾರ್ಯ – ಸೀಮಾ ವಿ. ಶೂರಪಾಲಿ

ಗೇರು ತೋಟದ ಆರೈಕೆಯಿಂದ ಕೆರೆ, ಬಾವಿಗಳಲ್ಲಿ ಬೋನಸ್ (ಲೇ: ಪ್ರಕಾಶ್ ಭಟ್ ಕರ್ಕಿ), ತೊಡದೇವು ಇವರ ಅನ್ನದೇವರು (ಲೇ: ಮನೋರಮಾ ಜೋಶಿ) ಹಾಗೂ ಮುಟ್ಟಿದರೆ ಮುನಿ, ಮೋನಿಷಳ ಕಣ್ಮಣಿ (ಲೇ: ಅನುಸೂಯ ಶರ್ಮ) ಲೇಖನಗಳು ಸಹ ವಿಷಯದ ಆಯ್ಕೆ ಹಾಗೂ ಪ್ರಸ್ತುತಿಯ ದೃಷ್ಟಿಯಿಂದ ಉಲ್ಲೇಖಾರ್ಹ ಎಂದು ಅಡಿಕೆ ಪತ್ರಿಕೆಯ ಕಾರ್ಯನಿರ್ವಾಹಕ ಸಂಪಾದಕ ಶ್ರೀ ಪಡ್ರೆ ಅಭಿಪ್ರಾಯಪಟ್ಟಿದ್ದಾರೆ. ಈ ಬಹುಮಾನ ಯೋಜನೆ ಮುಂದಿನ ವರ್ಷವೂ ಮುಂದುವರಿಯಲಿದೆ.



## ಕಾಮ್ ತರಬೇತಿಯ ಕುರಿತು 2008-09ನೇ ಸಾಲಿನ ಅಭ್ಯರ್ಥಿಗಳ ಅನಿಸಿಕೆ

ನನ್ನ ಪ್ರಥಮ ಕೃಷಿ ಲೇಖನ 'ರೈತರ ಕೈ ಹಿಡಿದ ಅನಾನಸ್' ಪ್ರಕಟವಾದಾಗ ತುಂಬಾ ಸಂತೋಷವಾಯಿತು. ಕೇವಲ ಸಂಪಾದಕರ ಪತ್ರ ವಿಭಾಗಕ್ಕೆ ಸೀಮಿತವಾಗಿದ್ದ ನನ್ನ ಬರಹಗಳು ಲೇಖನಗಳಾಗಿ ಪ್ರಕಟವಾದವು. ಲೇಖನಗಳ ಪರಿಷ್ಕರಣೆ ತುಸು ಖಾರವೆನಿಸಿದರೂ, ತುಂಬಾ ಉಪಯುಕ್ತವಾಗಿದ್ದು, ಅಧ್ಯಯನ ಮನೋಭಾವ ಬೆಳೆಸಲು ಪೂರಕವಾಗಿದೆ.

ಲೇಖನಗಳು ಪ್ರಕಟಗೊಂಡ ನಂತರ ನಾನು ಕೆಲಸ ನಿರ್ವಹಿಸುತ್ತಿರುವ ಶಿಕ್ಷಣ ಇಲಾಖೆಯಲ್ಲಿ ನನ್ನ ಸಹೋದ್ಯೋಗಿಗಳು, ಅಧಿಕಾರಿಗಳು, ಮಿತ್ರರು ನನ್ನನ್ನು ನೋಡುವ ರೀತಿಯೇ ಬದಲಾಗಿದೆ. ಸಮಾಜದಲ್ಲಿ ನನ್ನ ಗೌರವವೂ ಹೆಚ್ಚಾಗಿದೆ.

ನಾನು ಈ ಕೋರ್ಸ್‌ಗಾಗಿ ತುಂಬಿದ ಹಣ ಈಗ ಸಾರ್ಥಕವೆನಿಸಿದೆ. ಹಲವಾರು ರೈತರು ಸ್ನೇಹಿತರಾಗಿದ್ದಾರೆ. ನಾನು ಕೆಲಸ ಮಾಡುವ ಶಿಕ್ಷಣ ಇಲಾಖೆಯಲ್ಲಿ ಹೊಸ ಪ್ರಯೋಗಕ್ಕೆ ಅವಕಾಶ ಸಿಕ್ಕಿದೆ. ನನ್ನ ಮುಂದಿನ ಲೇಖನಗಳಿಗೂ ಕೇಂದ್ರದ ಮಾರ್ಗದರ್ಶನ ಅಗತ್ಯವಾಗಿ ಬೇಕಿದೆ. ಕೋರ್ಸ್ ಅವಧಿಯಲ್ಲಿ ಪ್ರಕಟವಾದ ನನ್ನ ಲೇಖನಗಳಿಗಾಗಿ ದೊರೆತಿರುವ ಸಂಭಾವನೆಯನ್ನು ಅಭಿಮಾನಪೂರ್ವಕವಾಕವಾಗಿ ಕಾಮ್‌ಗೆ ನೀಡುತ್ತಿದ್ದೇನೆ.

**– ಲಿಂಗರಾಜು ವಿ. ರಾಮಾಪುರ**
ಹುಬ್ಬಳ್ಳಿ

ಕೃಷಿಕರಿಗೆ ಸರಿಯಾದ ಮಾಹಿತಿ ಸಿಗಬೇಕೆಂಬ ಕಾಳಜಿಯೊಂದಿಗೆ ಕೈಗೊಂಡಿರುವ ಈ ತರಬೇತಿ ಕಾರ್ಯಕ್ರಮ ಕೂಡಾ ಅಗತ್ಯಾಧಾರಿತ. ಕಾರ್ಯಕ್ರಮಕ್ಕೆ ನೀವು ನಿಗದಿಪಡಿಸಿದ ಶುಲ್ಕ ನೀವು ಕೊಡುವ ಪುಸ್ತಕಕ್ಕೇ ಸಾಲದು. ಬೆಲೆ ಕಟ್ಟಲಾಗದಷ್ಟು ವಿಷಯ ಅದರಲ್ಲಿದೆ. ಇನ್ನುಳಿದಂತೆ ಪ್ರಾಥಮಿಕ ಶಿಬಿರ, ತರಬೇತಿಯ ಅವಧಿಯ ಮಾರ್ಗದರ್ಶನ ಇವೆಲ್ಲಾ ನಮಗೆ ಉಚಿತವಾಗಿ ನೀಡಿದಂತಾಗಿದೆ. ಲೇಖನಗಳಿಗೆ ಕೊಡುತ್ತಿರುವ ಸಲಹೆಗಳು ತೃಪ್ತಿ ನೀಡಿವೆ. ನಾನೂ ಲೇಖನ ಬರೆಯಬಲ್ಲೆ ಎಂಬ ಆತ್ಮವಿಶ್ವಾಸವನ್ನು ಈ ತರಬೇತಿ ನನ್ನಲ್ಲಿ ಮೂಡಿಸಿದೆ.

ಕಾಮ್ ಅಭರ್ಥಿಗಳು ಹಾಗೂ ಕಾಮ್ ಫೆಲೋಗಳ ನಡುವೆ ಸಂವಹನದ ಕೊರತೆ ಇದೆ. ನಮ್ಮ ನಡುವೆ ಸೂಕ್ತ ಸಂಪರ್ಕವೇರ್ಪಟ್ಟರೆ ಕಾಮ್ ಚಟುವಟಿಕೆಗಳಿಗೆ ಪೂರಕವಾಗಿ ಇನ್ನಷ್ಟು ಕೆಲಸ ಮಾಡಬಹುದು. ತರಬೇತಿಯ ಅರ್ಧ ಅವಧಿಯಲ್ಲಿ ಪರಾಮರ್ಶಿಸುವ ವ್ಯವಸ್ಥೆಯಿದ್ದರೆ ಒಳ್ಳೆಯದು. ಇದನ್ನು ಕೇಂದ್ರವೇ ಮಾಡಬೇಕೆಂದಿಲ್ಲ. ಆಯಾ ಭಾಗದ ಕಾಮ್ ಫೆಲೋಗಳೇ ಈ ನಿಟ್ಟಿನಲ್ಲಿ ಅಭ್ಯರ್ಥಿಗಳಿಗೆ ಅಗತ್ಯ ಮಾರ್ಗದರ್ಶನ ನೀಡಿ, ಆ ಪ್ರಕ್ರಿಯೆಯ ವಿವರವಾದ ವರದಿಯನ್ನು ಕೇಂದ್ರಕ್ಕೆ ತಲುಪಿಸಬಹುದು.

**– ಜಿ. ಗಣಪತಿ ಭಟ್**
ಹಾರೋಹಳ್ಳಿ

'ಕೃಷಿ-ಗ್ರಾಮೀಣ ಪತ್ರಿಕೋದ್ಯಮ ತರಬೇತಿ' ನಿಜಕ್ಕೂ ವಿಶಿಷ್ಟ ಅನುಭವ ನೀಡಿದೆ. ಸಹೃದಯ ಸಂಪನ್ಮೂಲ ವ್ಯಕ್ತಿಗಳ ಆತ್ಮೀಯ ಒಡನಾಟ, ಪ್ರೋತ್ಸಾಹದ ನುಡಿಗಳು ಬರವಣಿಗೆಯ ಉತ್ಸಾಹವನ್ನು ಇಮ್ಮಡಿಗೊಳಸಿದ್ದವು. ವಿಷಯವೊಂದನ್ನು ಸಾಮಾನ್ಯ ಓದುಗರಿಗೂ ಅರ್ಥವಾಗುವಂತೆ ಪರಿಣಾಮಕಾರಿಯಾಗಿ ಹೇಗೆ ಸಾದರಪಡಿಸಬಹುದು ಎಂಬುದನ್ನು ಈ ತರಬೇತಿ ನನಗೆ ಕಲಿಸಿದೆ. ಯಾವುದನ್ನು ಬರೆಯಬೇಕು, ಯಾವುದನ್ನು ಬರೆಯಬಾರದು ಎನ್ನುವ ಅರಿವನ್ನೂ ಅದು ಮೂಡಿಸಿದೆ. ಅಷ್ಟೇ ಅಲ್ಲ, ಪ್ರತಿಯೊಂದು ವಿಷಯವನ್ನೂ ಸೂಕ್ಷ್ಮವಾಗಿ ಗ್ರಹಿಸಿ ಅದರ ವಿವಿಧ ಆಯಾಮಗಳನ್ನು ಗುರುತಿಸುವುದು, ಕ್ಷೇತ್ರ ಭೇಟಿ, ಪ್ರಶ್ನಾವಳಿ ತಯಾರಿ, ಮಾಹಿತಿ ಸಂಗ್ರಹಣೆಯ ವಿಧಿ ವಿಧಾನಗಳನ್ನೆಲ್ಲಾ ಕಲಿಯಲು ಅನುವು ಮಾಡಿಕೊಟ್ಟಿದೆ.

'ದೀರ್ಘವಾಕ್ಯ ಬೇಡ; ಕ್ಲಿಷ್ಟ ಪದಗಳ ಬಳಕೆ ಕಡಿಮೆ ಮಾಡಿ; ನಿಮ್ಮಲ್ಲಿರುವ ಎಲ್ಲಾ ಮಾಹಿತಿಯನ್ನೂ ಲೇಖನಕ್ಕಿಳಿಸಬೇಕೆಂದೇನಿಲ್ಲ, ಅಗತ್ಯವಿದ್ದಷ್ಟೇ ವಿವರಿಸಿ' ಎಂಬ ಕೇಂದ್ರದ ಸಲಹೆ ನನ್ನನ್ನು ಎಚ್ಚರಿಸಿದೆ. 'ಇದು ಒಳ್ಳೆಯ ವಿಷಯ. ವಿಷಯ ಪ್ರಸ್ತುತಿ ಚೆನ್ನಾಗಿದೆ. ಅಸೈನ್‌ಮೆಂಟ್ ನಾವು ಹೇಳಿದ ರೀತಿಯಲ್ಲೇ ಚೆನ್ನಾಗಿ ತಯಾರಿಸಿ ಕಳುಹಿಸಿದ್ದೀರಿ' ಎಂಬ ಮಾತುಗಳು ಬರಹದ ಪರಿಷ್ಕರಣೆಗೆ ನೆರವಾಗಿವೆ. 'ತಿಂಗಳ ಅಸೈನ್‌ಮೆಂಟ್' ನಮ್ಮನ್ನು ಸುಳಿವುಗಳ ಹುಡುಕಾಟಕ್ಕೆ ಹಚ್ಚಿ ಹೊಸ ವಿಚಾರಗಳನ್ನು ಹೆಕ್ಕಿ ತೆಗೆದು ರೈತಪರ ಬರವಣಿಗೆಯ ಕೃಷಿ ನಡೆಸಲು ತುಂಬಾ ಪ್ರಯೋಜನಕಾರಿಯಾಗಿದೆ. ಹೋದಲ್ಲಿ ಬಂದಲ್ಲೆಲ್ಲಾ ಕಣ್ಣುಗಳು ವಿಷಯದ ಬೇಟೆಗೆ ಸಜ್ಜಾಗಿರುತ್ತವೆ. ಒಟ್ಟಾರೆ ಈ ತರಬೇತಿ ನನಗೆ ಸಾಕಷ್ಟು ಕಲಿಸಿದೆ. ಕಾಮ್ ಬಳಗಕ್ಕೆ ನಾನು ಚಿರಋಣಿಯಾಗಿದ್ದೇನೆ.

**– ಎ. ಎಲ್. ಜಯರಾಮು**
ಗೋವಾ

ಪತ್ರಿಕೆಗಳಲ್ಲಿ ಬರುವ ರೈತಪರ ಕಾಳಜಿ ಇರುವ, ಉಪಯುಕ್ತ ಮಾಹಿತಿಯುಳ್ಳ ಲೇಖನಗಳನ್ನು ನೋಡಿದಾಗ ನನಗೂ ಬರೆಯಬೇಕೆನಿಸುತ್ತಿತ್ತು. ಬರೆದರೆ ಪ್ರಕಟವಾದೀತೇ ಎಂಬ ಅಳುಕೂ ಇತ್ತು. ನಾನೊಬ್ಬಳು ಗೃಹಿಣಿ. ಹುಟ್ಟಿದ್ದು ಕಾಫಿ ಕುಟುಂಬದಲ್ಲಿ; ಸೇರಿದ್ದೂ ಕಾಫಿ ಕುಟುಂಬವನ್ನೇ. ದಿನದ ಹೆಚ್ಚು ಕಾಲ ಮನೆಕೆಲಸ, ಹೂಗಿಡ-ಕೈತೋಟದ ಆರೈಕೆ, ಹಸು, ನಾಯಿಗಳನ್ನು ನೋಡಿಕೊಳ್ಳುವುದು ಇವೇ ಮುಂತಾದ ಚಟುವಟಿಕೆಗಳಲ್ಲೇ ಕಳೆದುಹೋಗುತ್ತಿತ್ತು. ಕೊಡಗಿನ ವಸತಿಶಾಲೆಯಲ್ಲಿ ಓದುವ ಮಗ, ಕಾಫಿ ಸಂಘಟನೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿರುವ ಪತಿ, ಈ ಮಧ್ಯೆ ನನಗೂ ಹೊಸತೇನನ್ನಾದರೂ ಮಾಡುವ ಹಂಬಲ. ಒಮ್ಮೆ ನಮ್ಮ ಮನೆಗೆ ಬಂದ 'ಕೃಷಿಕ' ಪತ್ರಿಕೆಯ ಸಂಪಾದಕ ಜಯರಾಂ ನನ್ನನ್ನು ಕಾಮ್ ಸೇರಲು ಪ್ರೇರೇಪಿಸಿದರು. ಒಳ್ಳೆಯ ತರಬೇತಿ, ಮಾರ್ಗದರ್ಶನ ಸಿಗುತ್ತದೆ ಎಂಬ ಅವರ ನುಡಿ ನನ್ನ ಅನುಭವಕ್ಕೂ ಬಂದಿದೆ.

ಕಾಮ್‌ನಲ್ಲಿ ಬರವಣಿಗೆಗೆ ಮಾರ್ಗದರ್ಶನ ಮಾತ್ರವಲ್ಲದೆ ಬರವಣಿಗೆಗೆ ಒಂದು ಹಿತವಾದ ಒತ್ತಡವೂ ಇದೆ. ಪತ್ರಿಕೆಗಳಲ್ಲಿ ಇತರ ಅಭ್ಯರ್ಥಿಗಳ ಲೇಖನ ಪ್ರಕಟವಾದಾಗ ಉಂಟಾಗುತ್ತಿದ್ದ ತಳಮಳ ನನ್ನಲ್ಲಿ ಲೇಖನ ಬರೆಯಲೇಬೇಕೆಂಬ ಸಂಕಲ್ಪ ಹುಟ್ಟುಹಾಕುತ್ತಿತ್ತು. ಕಾರ್ಯನಿಮಿತ್ತ ಆಚೀಚೆ ಹೋದಾಗಲೆಲ್ಲಾ ಸುಳಿವುಗಳನ್ನು ಅರಸುತ್ತಿದ್ದೆ. ಹಾಗೆಯೇ ಅವುಗಳ ಬೆನ್ನತ್ತುತ್ತಿದ್ದೆ.

ಕೊಡಗಿನ ಗೋಣಿಕೊಪ್ಪಕ್ಕೆ ಮಗನನ್ನು ಶಾಲೆಗೆ ಬಿಡಲು ಹೋಗಿಬರುವಾಗ ಮಾರ್ಗಮಧ್ಯೆ ಸಿಗುವ ಪಿರಿಯಾಪಟ್ಟಣದಲ್ಲಿ ಹೊಗೆ ತಂಬಾಕು ಬೆಳೆಗಾರರನ್ನು ಮಾತನಾಡಿಸಿದೆ. ಅವರ ಕುಂದುಕೊರತೆಗಳನ್ನು ಕುರಿತ ಲೇಖನ ಸಿದ್ಧವಾಯಿತು. ಪ್ರಜಾವಾಣಿಯಲ್ಲಿ ಪ್ರಕಟವಾದ 'ಬಳ್ಳಿ ತರಕಾರಿ ತುಪ್ಪದ ಹೀರೆ' ಲೇಖನ ನೋಡಿ 150ಕ್ಕೂ ಅಧಿಕ ಆಸಕ್ತರು ಬೀಜ ಪಡೆದಿದ್ದಾರೆ. ಹಲವರು ನನ್ನಲ್ಲಿಲ್ಲದ ಬೀಜಗಳನ್ನು ಕಳಿಸಿಕೊಟ್ಟರು. ಆ ಬೀಜಗಳು ನನ್ನ ಕೈತೋಟದಲ್ಲಿ ಮೊಳಕೆಯೊಡೆಯುತ್ತಿವೆ. ಭತ್ತದ ಬೀಜಬ್ಯಾಂಕ್ ಬಗ್ಗೆ ಬರೆದಾಗ ಸಂಬಂಧಿಸಿದವರಿಗೆ 300ಕ್ಕೂ ಅಧಿಕ ಆಸಕ್ತ ರೈತರು ಕರೆಮಾಡಿ ಮಾಹಿತಿ ಪಡೆದರು. ಜನಪ್ರಿಯವಾಗುತ್ತಿರುವ ತರಕಾರಿ ನರ್ಸರಿಗಳನ್ನು ಕುರಿತ ನನ್ನ ಲೇಖನ ಪ್ರಕಟವಾದಾಗ ವಿವಿಧೆಡೆಗಳಿಂದ ರೈತರು, ಸ್ವಸಹಾಯ ಸಂಘದವರು ಆ ನರ್ಸರಿಗೆ ಭೇಟಿ ಕೊಟ್ಟರು. ಇದರಿಂದಾಗಿ ಗಿಡಗಳಿಗೆ ಬೇಡಿಕೆ ಹೆಚ್ಚಿತು ಎಂದು ನರ್ಸರಿ ಮಾಲೀಕರು ಕರೆ ಮಾಡಿ ತಿಳಿಸಿದರು. ಬೇಲೂರು ತಾಲೂಕಿನಲ್ಲಿ ಅಂಥೋರಿಯಂ ಬೇಸಾಯ ಮಾಡಿದ್ದ ಮಹಿಳೆಯೊಬ್ಬರನ್ನು ಕುರಿತ ನನ್ನ ಲೇಖನಕ್ಕೆ ಬಂದ ಪ್ರತಿಕ್ರಿಯೆ ಅವರ ವ್ಯವಹಾರ ಬೆಳೆಯಲು ಸಹಕಾರಿಯಾಗಿದ್ದರೂ, ಕೆಲವು ದೂರವಾಣಿ ಕರೆಗಳು ಅವರ ಮನಸ್ಸಿಗೆ ಕಿರಿಕಿರಿಯುಂಟು ಮಾಡಿದವು. ಇದನ್ನು ತಿಳಿದು ನಾನು ಮುಜುಗರಪಟ್ಟೆ.

ಉದಯವಾಣಿ ಪತ್ರಿಕೆಯಿಂದ 'ಕಾಫಿ ಕಾಯಿಕೊರಕದ ಬಗ್ಗೆ ಬರೆಯಿರಿ' ಎಂದು ನೇರ ಕರೆಮಾಡಿ ತಿಳಿಸಿದ್ದು ಮರೆಯಲಾಗದ ಕ್ಷಣ. ಹೀಗೆ ಒಂದು ವರ್ಷ ಸರಿದುಹೋದ ಪರಿಯೇ ವಿಸ್ಮಯವೆನಿಸುತ್ತದೆ. ಕಾಮ್‌ನ ಮಾಹಿತಿ ಸಂಪುಟವಂತೂ ಅಮೂಲ್ಯ ಮಾರ್ಗದರ್ಶಿ. ಅಭಿವೃದ್ಧಿ ಸಂವಹನ ಕುರಿತ ಮಾಹಿತಿಗಳು ಮತ್ತು ಲೇಖನ ಬರೆಯುವ ಮೊದಲು ಪ್ರಶ್ನಿಸಿಕೊಳ್ಳುವ ವಿಧಾನದ ಕುರಿತ ವಿವರ ತುಂಬ ಉಪಯುಕ್ತ.

**– ಪೂರ್ಣಿಮಾ ಕಾನಹಳ್ಳಿ**
ಮಾಲಸವರ

5ನೇ ಪುಟಕ್ಕೆ ಮುಂದುವರೆದಿದೆ

ಹೊಸಹಳ್ಳಿಯಲ್ಲಿ ನಡೆದ ಪ್ರಾಥಮಿಕ ಶಿಬಿರ ಕಾಲೇಜು ದಿನಗಳನ್ನು ನೆನಪಿಸುವಂತಿತ್ತು. ಸಂಪನ್ಮೂಲ ವ್ಯಕ್ತಿಗಳಿಂದ ಮಾಹಿತಿಯ ಮಹಾಪೂರವೇ ಹರಿದು ಬಂತು. ತಿಂಗಳ ಕೊನೆ ಬಂದಂತೆಲ್ಲಾ ಅಸೈನ್‌ಮೆಂಟ್ ಸಮಯಕ್ಕೆ ಸರಿಯಾಗಿ ಒಪ್ಪಿಸಲು ಸಾಧ್ಯವಾದೀತೇ ಎಂದು ಯೋಚಿಸಿ ತಲೆಬಿಸಿ ಆದದ್ದೂ ಇದೆ. ಕೆಲಸದ ಒತ್ತಡಗಳಿದ್ದರೂ ಕೇಂದ್ರದ ನಿರಂತರ ಸಂಪರ್ಕ ಬರವಣಿಗೆ ಮುಂದುವರಿಸಲು ಸಹಕಾರಿಯಾಗಿತ್ತು. ತರಬೇತಿಯ ಅವಧಿಯಲ್ಲಿ ಕೆಲವು ಲೇಖನಗಳು ಪ್ರಕಟವಾಗಿವೆ; ಲೇಖನ ಬರವಣಿಗೆ ಅಸಾಧ್ಯವಾದುದಲ್ಲ ಎಂಬುದು ಅನುಭವಕ್ಕೆ ಬಂದಿದೆ.

**– ಡಾ. ಅಶ್ವಿನಿ ಕೃಷ್ಣಮೂರ್ತಿ**
ಅಡ್ಯನಡ್ಕ

ಬರವಣಿಗೆಯ ಹವ್ಯಾಸ ನನಗೆ ಮೊದಲಿನಿಂದಲೂ ಇತ್ತು. ವಿವಿಧ ಪತ್ರಿಕೆಗಳಲ್ಲಿ ನನ್ನ ಕಥೆ, ಕವನ, ಲೇಖನಗಳು ಪ್ರಕಟಗೊಂಡಿವೆ. ಹನಿಗವನ ನೆಚ್ಚಿನ ಸಾಹಿತ್ಯ ಪ್ರಕಾರ. ಆದರೆ ಕೃಷಿ ಬರಹ ಬರೆದದ್ದು ಕಡಿಮೆ. 2008ರಲ್ಲಿ ಆಕಸ್ಮಿಕವಾಗಿ ಕೃಷಿ–ಗ್ರಾಮೀಣ ಪತ್ರಿಕೋದ್ಯಮ ತರಬೇತಿಗೆ ಸೇರಿದೆ. ಆ ಬಳಿಕ ವಿಜಯ ಕರ್ನಾಟಕದಲ್ಲಿ ನನ್ನ ಒಂದು ಹಾಗೂ ಪ್ರಜಾವಾಣಿಯಲ್ಲಿ ಏಳು ಕೃಷಿ ಲೇಖನಗಳು ಪ್ರಕಟವಾಗಿವೆ. ಈಗ ನನ್ನಲ್ಲಿ ಕೃಷಿ ಲೇಖನ ಬರೆಯಬಹುದೆಂಬ ಆತ್ಮವಿಶ್ವಾಸ ಮೂಡಿದೆ. ಇನ್ನೂ ಉತ್ತಮ ಕೃಷಿ ಲೇಖನಗಳನ್ನು ಬರೆಯುವ ನಿಟ್ಟಿನಲ್ಲಿ ಪ್ರಯತ್ನವನ್ನು ಮಾಡುತ್ತಿದ್ದೇನೆ.

**– ಸಹನಾ ಕಾಂತಬೈಲು**
ಬಾಲೆಂಬಿ

### ಕೊಡುಗೆ/ದೇಣಿಗೆ

**ನಗದು**

| | | |
|---|---|---|
| ಹಿತೈಷಿ | – | ರೂ. 10000 |
| ಡಾ. ಪಿ. ಚಂದ್ರಶೇಖರ, ಹೈದರಾಬಾದ್ | – | ರೂ. 5000 |

**ಪುಸ್ತಕ**

| | | |
|---|---|---|
| ಜಾಗತೀಕರಣ ಮತ್ತು ಗ್ರಾಮಭಾರತ | – | ಡಾ. ಎನ್. ಜಗದೀಶ್ ಕೊಪ್ಪ |
| ಕೃಷಿ ಮತ್ತು ಪೇಟೆಂಟ್ | – | ಡಾ. ಟಿ.ಎಸ್. ಚನ್ನೇಶ್ |
| ಮಣ್ಣಿನೊಳಗಣ ಮರ್ಮ | – | ಚನ್ನಪ್ಪ ಅಂಗಡಿ |
| ನೆಲಮೂಲ ಕೃಷಿಜ್ಞಾನ | – | ಗಾಣಧಾಳು ಶ್ರೀಕಂಠ |
| ಬಾವಿ ಬಾವಿಗೂ ಅಂತರ, ಮಳೆಯ ನೀರು ಸಂಗ್ರಹಣೆ ಮರುಪೂರಣ, ಅಂತರ್ಜಲದ ವೈಜ್ಞಾನಿಕ ಅರಿವು, ಅಂತರ್ಜಲ ಅನ್ವೇಷಣೆಯ ವಿಧಾನಗಳು | – | ಕೆ. ರೇಖಾ ಸಂಪತ್ |

ಫೆಲೋ ಕಾಲಂ

## ಬರವಣಿಗೆಯ ಹೊಸ ಬೆಳಕು

**– ಶೈಲಜಾ ಬೆಳ್ಳಂಕಿಮಠ**
ಗೋಕಾಕ



ಕಾಮ್ ನ್ಯೂಸ್‌ಗೆ ಬರೆಯಬೇಕೆಂದು ಬಹುದಿನಗಳಿಂದ ಅನಿಸುತ್ತಿತ್ತು. ಅಂತೆಯೇ ಈ ಬರಹ. ಕೃಷಿಕಪರ ಚಿಂತನೆಗಳಿಗೆ ಆದ್ಯತೆ ನೀಡಿ, ಫಾರ್ಮುಲಾ ಬರಹಗಳಿಗೆ ವಿದಾಯ ಹೇಳಿ ರೈತನ ಅಗತ್ಯಗಳಿಗೆ ಸ್ಪಂದಿಸುವ ಲೇಖಕರನ್ನು ರೂಪಿಸುವ ಕೃಷಿ ಮಾಧ್ಯಮ ಕೇಂದ್ರದ ಒಡನಾಟದಲ್ಲಿ ನಾನು ಕಲಿತದ್ದು ಅಪಾರ. ಕೃಷಿರಂಗದ ಬದಲಾವಣೆ–ಬೆಳವಣಿಗೆಗಳಿಗೆ, ಚಿಂತೆ–ಚಿಂತನೆಗಳಿಗೆ, ಕೃಷಿಕಪರ ಬರವಣಿಗೆಯ ತುಡಿತಗಳಿಗೆ ಅಕ್ಷರರೂಪ ನೀಡುವ ನನ್ನ ಆಸಕ್ತಿಯನ್ನು ಸಾಕಾರಗೊಳಿಸಲು ಸಾಧ್ಯವಾಗಿರುವುದು ನನಗೆ ತುಂಬಾ ಸಂತಸ ತಂದಿದೆ.

ಬರವಣಿಗೆಯ ವಿವಿಧ ಪ್ರಕಾರಗಳ ಅರಿವಿಲ್ಲದೆ, 'ಲೇಖನ ಅಂದರೆ ನಾಲ್ಕು ಪ್ಯಾರಾ, ಒಂದು ಫೋಟೋ' ಸೂತ್ರಕ್ಕೆ ನಾನೂ ಹೊರತಾಗಿರಲಿಲ್ಲ. ಈಗ ಹಾಗಿಲ್ಲ. ನಾನು ನೋಡುವ ವಸ್ತು, ವಿಚಾರ, ಘಟನೆ, ವ್ಯಕ್ತಿಯ ಹಿಂದೆ ಬರಹವಾಗಬಲ್ಲ ಏನಾದರೂ ವಸ್ತು ಇದೆಯೇ ಎಂಬ ಕುತೂಹಲ ಸದಾ ಇರುತ್ತದೆ. ಬರೆಯಬೇಕೆನಿಸುವ ವಿಷಯದ ಬಗ್ಗೆ ಎಲ್ಲಾ ಕೋನಗಳಿಂದಲೂ ಮಾಹಿತಿ ಕಲೆಹಾಕಲು ಪ್ರಾರಂಭಿಸುತ್ತೇನೆ. ಐಡಿಯಾ ಫೈಲ್ ತೆರೆದಿದ್ದೇನೆ.

ಪತ್ರಿಕೆ, ನಿಯತಕಾಲಿಕಗಳನ್ನು ನಿಯಮಿತವಾಗಿ ಓದುವ ಹವ್ಯಾಸ ರೂಢಿಸಿಕೊಂಡಿದ್ದೇನೆ. ಕೇಂದ್ರದ ತರಬೇತಿಯ ಅವಧಿಯಲ್ಲಿ ಸಂಪನ್ಮೂಲ ವ್ಯಕ್ತಿಗಳ ಒಡನಾಟದಿಂದ ಕಲಿತದ್ದೂ ಬಹಳ. ಪ್ರಾಥಮಿಕ ಶಿಬಿರವೂ ಕಲಿಕೆಯ ಒಂದು ವಿಶಿಷ್ಟ ಅನುಭವ ನೀಡಿದೆ. ತರಬೇತಿಯ ಅವಧಿಯ ನಂತರವೂ ಈ ತಂಡ ನಿರಂತರ ಪ್ರೋತ್ಸಾಹಿಸುತ್ತಿದೆ. ತರಬೇತಿಯಿಂದಾಗಿ ಹೊಸ ಬರಹಗಾರರು, ಸಂಪನ್ಮೂಲ ವ್ಯಕ್ತಿಗಳು, ಕೃಷಿ ಸಾಧಕರ ಪರಿಚಯವಾಗಿ ಆತ್ಮೀಯತೆಯ ಸಾಂಗತ್ಯ ದೊರೆತಿದೆ. ಹಾಗೆಯೇ ಬರಹಗಾರನಿಗಿರಬೇಕಾದ ಬದ್ಧತೆ, ಜವಾಬ್ದಾರಿಗಳ ಅರಿವು ಮೂಡಿಸಿದೆ.

ಅಡಿಕೆ ಪತ್ರಿಕೆಗಾಗಿ ಬರೆದ ಒಂದು ಲೇಖನಕ್ಕೆ ಪೂರಕ ಮಾಹಿತಿ ಸಂಗ್ರಹಿಸಲು ಸಂಪಾದಕರಿಂದ 8–10 ಬಾರಿ ದೂರವಾಣಿ ಕರೆ! ಲೇಖನದ ಪ್ರತಿಯೊಂದು ಅಂಶವನ್ನೂ ಒರೆಗೆ ಹಚ್ಚುವ ಅವರ ರೀತಿ ನನ್ನ ಮುಂದಿನ ಬರವಣಿಗೆಗಳಿಗೆ ಮಾರ್ಗದರ್ಶಿಯಾಯಿತು.

ವಿಳಾಸ : C/o ಬಸವರಾಜ ಪಿ. ಬೆಳ್ಳಂಕಿಮಠ
'ಸಿದ್ಧರಾಮೇಶ್ವರ ಸದನ, ಸಮುದಾಯ ಭವನದ ಹತ್ತಿರ
ಲಕ್ಷ್ಮಿ ಬಡಾವಣೆ, ಗೋಕಾಕ, ಬೆಳಗಾವಿ ಜಿಲ್ಲೆ
08332-228655

### ಕೃಷಿ ಸಂಪದ

ಕನ್ನಡ ಕೃಷಿ ಸಂವಹನ ಕ್ಷೇತ್ರದಲ್ಲಿ ಹೊಸ ಪ್ರಯತ್ನ 'ಕೃಷಿ ಸಂಪದ' ಇ–ಪತ್ರಿಕೆ (http://krushi.sampada.net/). ಸಂಪಾದಕರು ಅಡ್ಡೂರು ಕೃಷ್ಣ ರಾವ್. ಸುಂದರ ವಿನ್ಯಾಸ ಹಾಗೂ ಆಸಕ್ತಿಯುತ ವಿಷಯಗಳೊಂದಿಗೆ ಪತ್ರಿಕೆಯ ಮೊದಲ ಸಂಚಿಕೆ ಈಗಾಗಲೇ ಪ್ರಕಟಗೊಂಡಿದೆ. 'ಕೃಷಿ ಹಾಗೂ ಗ್ರಾಮೀಣ ಬದುಕಿನ ಬಗ್ಗೆ ಕಾಳಜಿ ಇರುವ ಎಲ್ಲರಿಗೂ 'ಕೃಷಿ ಸಂಪದ' ವೇದಿಕೆಯಾಗಲಿ' ಎಂಬ ಅಡ್ಡೂರು ಅವರ ಆಶಯವನ್ನು ಕೃಷಿ ಮಾಧ್ಯಮ ಕೇಂದ್ರವೂ ಬೆಂಬಲಿಸುತ್ತದೆ. ಕಾಮ್ ಬಳಗದವರ ಲೇಖನದ ಪ್ರಕಟಣೆಗೆ ಇದೀಗ ಇನ್ನೊಂದು ಅವಕಾಶ ಸಿಕ್ಕಂತಾಗಿದೆ. 'ಕೃಷಿ ಸಂಪದ'ಕ್ಕೆ ಶುಭಾಶಯಗಳು.

– ಸಂಪಾದಕಿ




ಕೃಷಿ ಸಂಪದ ತಂಡ:
ಶಿವಾನಂದ ಕಳವೆ, ಮಲ್ಲಿಕಾರ್ಜುನ ಹೊಸಪಾಳ್ಯ, ಚಾಮರಾಜ ಸವಡಿ, ಭೂಷಣ್ ಮಿಡಿಗೇಷಿ, ಕೆ. ಶಾಮ ಭಟ್, ಶಾಮ ಕಶ್ಯಪ, ವಸಂತ ಕಜೆ.
ಸಂಪರ್ಕ: krushi@sampada.net; ದೂರವಾಣಿ: 080-32900111

## ಕಾಮ್ ಅಭ್ಯರ್ಥಿಗಳ ಇತ್ತೀಚಿನ ಪ್ರಕಟಿತ ಲೇಖನಗಳು

**ನಿರಂತರ ಬೆಳೆ: ಬದುಕಿಗೆ ಕಳೆ**
(ಪ್ರಜಾವಾಣಿ, 9.07.2009)
– ಎ. ಎಲ್. ಜಯರಾಮು

**ಬಾಳೆನಾರಿನ ಅಂಗಿ**
(ಅಡಿಕೆ ಪತ್ರಿಕೆ, ಆಗಸ್ಟ್ 2009)
– ಎ. ಎಲ್. ಜಯರಾಮು

**ಕಾಡಾನೆ ಹಾವಳಿ ತಡೆಗೆ ಹೊಸ ಅಸ್ತ್ರ: ಮೆಣಸಿನಕಾಯಿ!**
(ಕೃಷಿ ಮಿತ್ರ, ಜುಲೈ 2009)
– ಎ. ಎಲ್. ಜಯರಾಮು

**ಪಾರ್ಟ್‌ಟೈಮ್ ಕೃಷಿಕರ ಕಾಯಕ ಪ್ರೇಮ!**
(ಗೋವಾ ಜನನುಡಿ, ಜೂನ್ 2009)
– ಎ. ಎಲ್. ಜಯರಾಮು

**ತೆಂಗಿನ ಕವಚದ ಮೇಲೆ ಚಿತ್ರ–ಚಿತ್ತಾರ ಲೀಲೆ**
(ತರಂಗ, 24.9.2009)
– ಎ. ಎಲ್. ಜಯರಾಮು

**ರಂಗಿನ ಮರ, ಸಪ್ಪಂಗೆ**
(ತರಂಗ, 1.10.2009)
– ಎ. ಎಲ್. ಜಯರಾಮು

**ಮರಳಿ ಬಂದ ನಾಟಿ ರಾಗಿ**
(ಪ್ರಜಾವಾಣಿ, 4.05.2009)
– ರವಿ ವಿಶ್ವನಾಥಪುರ

**ಬರ ಕಾಣದ ಸಿರಿ ಧಾನ್ಯಗಳು**
(ಪ್ರಜಾವಾಣಿ, 6.08.2009)
– ರವಿ ವಿಶ್ವನಾಥಪುರ

**ರೈತರ ಪ್ರಜಾತೀರ್ಪು**
(ಕೃಷಿ–ಕಾಮಧೇನು, ಆಗಸ್ಟ್ 2009)
– ರವಿ ವಿಶ್ವನಾಥಪುರ

**ಮುಯ್ಯಿ ಸಾಲಿನ ಸಹಕಾರಿ ಕೃಷಿ**
(ಅಡಿಕೆ ಪತ್ರಿಕೆ, ಸೆಪ್ಟೆಂಬರ್ 2009)
– ಜಿ. ಗಣಪತಿ ಭಟ್

**ಅಕಾಲ ಅವರೆ**
(ಪ್ರಜಾವಾಣಿ, 3.09.2009)
– ಜಿ. ಗಣಪತಿ ಭಟ್

**ಅಡಿಕೆಗೆ ಹಳದಿ ರೋಗ**
(ಪ್ರಜಾವಾಣಿ, 10.09.2009)
– ಸಹನಾ ಕಾಂತಬೈಲು

**ಡೇರೆ ಕೈತೋಟದ ಅಂದಗಾತಿ**
(ಪ್ರಜಾವಾಣಿ, 27.08.2009)
– ಗಣಪತಿ ವಿ. ಹೆಗಡೆ

**ಮರಗಳ ಶತ್ರು ಬಂದಳಿಕೆ**
(ಪ್ರಜಾವಣಿ, 1.10.2009)
– ಗಣಪತಿ ವಿ. ಹೆಗಡೆ

**ಮಳೆ ಬಂತು, ಏನು ಪ್ರಯೋಜನ?**
(ಪ್ರಜಾವಾಣಿ, 28.09.2009)
– ಅಂಗರಾಜ ವಿ. ರಾಮಾಪುರ

**ಸಾವಯವ ಕಡಲೆ ಬೆಳೆ – ಒಂದು ಪ್ರಯೋಗ**
(ಕೃಷಿ–ಕಾಮಧೇನು, ಆಗಸ್ಟ್ 2009)
– ಶಾರದಾ ಜಿ. ಪಾಟೀಲ

**ಪ್ರಗತಿಪಥದಲ್ಲಿ ಎಡೆಹಳ್ಳಿ**
(ಕೃಷಿಕ, ಜುಲೈ–ಆಗಸ್ಟ್ 2009)
– ಕೆ.ಎಸ್. ಪೂರ್ಣಿಮ

**ಕಾಫಿಯಲ್ಲಿ ಬೆರ್ರಿ ಬೋರರ್ ಎಂಬ ಮಹಾಮಾರಿ ಕಾಯಿಲೆ**
(ಕೃಷಿಕ, ಜುಲೈ–ಆಗಸ್ಟ್ 2009)
– ದಿನೇಶ್ ದೇವವೃಂದ

---

## ಕಾಮ್ ಫೆಲೋಗಳ ಇತ್ತೀಚಿನ ಪ್ರಕಟಿತ ಲೇಖನಗಳು

**ಮುಟ್ಟಿದರೆ ಮುನಿ, ಮೋನಿಷಳ ಕಣ್ಮಣಿ**
(ಅಡಿಕೆ ಪತ್ರಿಕೆ, ಸೆಪ್ಟೆಂಬರ್ 2009)
– ಅನುಸೂಯ ಶರ್ಮ

**ಹಲಸಿನ ಔತಣ**
(ಉದಯವಾಣಿ, 21.06.2009)
– ಅನುಸೂಯ ಶರ್ಮ

**ಮಣ್ಣು ಪರೀಕ್ಷೆ**
(ಕನ್ನಡಪ್ರಭ, 2009)
– ಅನುಸೂಯ ಶರ್ಮ

**ಗಜ್ಜುಗ, ಮುಳ್ಳು ಮುಸುಕಿನಲ್ಲಿ ಮದ್ದು**
(ಸುಧಾ, 27.08.2009)
– ಅನುಸೂಯ ಶರ್ಮ

**ಹಲಸಿನ ಸಾವಯವ ಖಾದ್ಯ ಉತ್ಸವ**
(ಅಡಿಕೆ ಪತ್ರಿಕೆ, ಆಗಸ್ಟ್ 2009)
– ರೇಖಾ ಸಂಪತ್

**ಕೆಸರುಮಡು ಹಲಸು**
(ಅಡಿಕೆ ಪತ್ರಿಕೆ, ಸೆಪ್ಟೆಂಬರ್ 2009)
– ರೇಖಾ ಸಂಪತ್

**ಅಂತರ್ಜಾಲ – ನಾಲ್ಕು ಪುಸ್ತಕಗಳು**
(ಅಡಿಕೆ ಪತ್ರಿಕೆ, ಆಗಸ್ಟ್ 2009)
– ರೇಖಾ ಸಂಪತ್

**ನೆರೆ ರಾಜ್ಯಕ್ಕೆ ಕೊಡಗಿನ ಕಿತ್ತಳೆ**
(ಪ್ರಜಾವಾಣಿ, 25.06.2009)
– ಸಿ.ಎಸ್. ಸುರೇಶ್

**ಕಾಫಿ: ಕಾಯಿಕೊರಕಗಳ ತಡೆಗೆ ಬಲೆ**
(ಪ್ರಜಾವಾಣಿ, 9.07.2009)
– ಸಿ.ಎಸ್. ಸುರೇಶ್

**ಕೊಡಗಿನಲ್ಲಿ ತಾಳೆ ಬಾಳೀತೇ?**
(ಪ್ರಜಾವಾಣಿ, 11.12.2008)
– ಸಿ.ಎಸ್. ಸುರೇಶ್

**ಬಿಸಿಲ ಜಿಲ್ಲೆಯಲ್ಲಿ ಸಮೃದ್ಧ ಪೇರಲ**
(ಪ್ರಜಾವಾಣಿ, 1.10.2009)
– ಪರಮೇಶ್ವರಯ್ಯ ಸೊಪ್ಪಿಮಠ

**ನಲಿಯುತ್ತಾ ಕಲಿಯಲಿದ್ದಾರೆ ಚಿಣ್ಣರು**
(ಜನಪದ, ಜೂನ್ 2009)
– ಪರಮೇಶ್ವರಯ್ಯ ಸೊಪ್ಪಿಮಠ

**ಆನಂದಳ್ಳಿಯಲ್ಲಿ ಆನಂದವೋ ಆನಂದ**
(ಈ ನಮ್ಮ ಕನ್ನಡ ನಾಡು, 17.08.2009)
– ಪರಮೇಶ್ವರಯ್ಯ ಸೊಪ್ಪಿಮಠ

**ಇಡ್ಕಿದು ಗ್ರಾಮಕ್ಕೆ ವರವಾದ ರಸಾವರಿ**
(ಅಡಿಕೆ ಪತ್ರಿಕೆ, ಆಗಸ್ಟ್ 2009)
– ಪ್ರಕಾಶ ಭಟ್ ಕರ್ಕಿ

**ಬಯೋಗ್ಯಾಸ್ ಗ್ರಾಮ**
(ಪ್ರಜಾವಾಣಿ, 10.09.2009)
– ಪ್ರಕಾಶ ಭಟ್ ಕರ್ಕಿ

**ದ್ರವರೂಪದ ಸಾವಯವ ಗೊಬ್ಬರ!**
(ಪ್ರಜಾವಾಣಿ, 4.06.2009)
– ಸರ್ವಮಂಗಳಾ ಬಿ. ಪಾಟೀಲ

**ಅಡಿಕೆಗೆ ಮಾನ ಸಿಕ್ಕೀತೇ?**
(ಪ್ರಜಾವಾಣಿ, 4.05.2009)
– ನಿತಿನ್ ಹೆಗಡೆ ಮುತ್ತಿಗೆ

**ಒಕ್ಕಲುತನ ಹೊರೆ ಅಲ್ಲ**
(ಪ್ರಜಾವಾಣಿ, 25.06.2009)
– ಸೀಮಾ ವಿ. ಶೂರಪಾಲಿ

**DK's dying paddy culture**
(Deccan Herald, 22.09.2009)
- Prakash Bhat Karki

**ಕನ್ನಡ ಪ್ರಭ 'ಹಿತ್ತಿಲು' ಅಂಕಣದಲ್ಲಿ ಪ್ರಕಟವಾದ ಅನುಸೂಯ ಶರ್ಮ ಅವರ ಲೇಖನಗಳು**

**ಧಾನ್ಯ ಸಂಸ್ಕರಣೆ**
(23.05.2009)

**ಇದು ಸಕ್ಕರೆಗೆ ಪರ್ಯಾಯ**
(30.05.2009)

**ಶತಾವರಿ**
(6.05.2009)

**ನೆಗಡಿಗೊಂದು ಬುಗುಡಿ**
(13.6.2009)

**ಬಣ್ಣವೇ ಬಂಡವಾಳ ಈ ಕನಕಾಂಬರಕ್ಕೆ**
(20.06.2009)

**ಮೆಹೆಂದಿ ಮಾಯಾಜಾಲ**
(27.06.2009)

**ಅಮೃತಕ್ಕೆ ಸಮಾನ ಈ ಅಮೃತ ಬಳ್ಳಿ**
(4.07.2009)

**ಸೊಪ್ಪು ತಿಂದು ಮುಪ್ಪು ದೂರ ಸರಿಸಿ**
(11.07.2009)

**ಅಂತಿಂಥ ಗಿಡವಲ್ಲ ಈ ಆಂಥೋರಿಯಮ್**
(18.07.2009)

**ಬೆಡಗಿನ ಬೆಣ್ಣೆಹಣ್ಣು (ಆವಕ್ಯಾಡೋ) ಮರದಲ್ಲಿದ್ದರೆ ಹಣ್ಣಾಗದು**
(25.07.2009)

# ಕೃಷಿ-ಗ್ರಾಮೀಣ ಪತ್ರಿಕೋದ್ಯಮ ತರಬೇತಿ: 2009-10
## ಅಭ್ಯರ್ಥಿಗಳು

| | | |
|---|---|---|
| ಆಶಾಲತಾ ಆರ್. ಕುಲಕರ್ಣಿ<br>ಸಹಾಯಕ ಕೃಷಿ ನಿರ್ದೇಶಕಿ (ರೈತ ಮಹಿಳೆ)<br>ಉಪ ಕೃಷಿ ನಿರ್ದೇಶಕರ ಕಚೇರಿ<br>ಜಿಲಾ ಕೃಷಿ ತರಬೇತಿ ಕೇಂದ್ರ, ಬಬ್ಬೂರು ಫಾರ್ಮ್<br>ಹಿರಿಯೂರು ತಾಲೂಕು, ಚಿತ್ರದುರ್ಗ ಜಿಲ್ಲೆ<br>08193-200444; 9480313760 | ಶ್ವೇತಾ ಐ.<br>ಇ/ಮ ಗೋವಿಂದ ಭಟ್ ಐ.<br>'ಕೇಶವ ಕೃಪಾ', ದೇವಸ್ಯ ಮನೆ<br>ಅಂಚೆ: ಸುಳ್ಯಪದವು<br>ಪುತ್ತೂರು ತಾಲೂಕು, ದಕ್ಷಿಣ ಕನ್ನಡ<br>08251-289310; 9663527407 | ಗಂಗಾ ಅಂಕದ<br>ಸಂಶೋಧನಾಧಿಕಾರಿ<br>ಬೈಫ್ ಗ್ರಾಮೀಣಾಭಿವೃದ್ಧಿ ಸಂಸ್ಥೆ-ಕರ್ನಾಟಕ<br>ಸಂಖ್ಯೆ 2, 11ನೇ ಮುಖ್ಯರಸ್ತೆ<br>ಕುಸುಮನಗರ, ಧಾರವಾಡ - 580 008<br>0836-2774622; 9449973522 |
| ಕೆ. ಶಶಿಧರ ಹೆಮ್ಮಣ್ಣ<br>ಈಟಿವಿ ನೆಟ್‌ವರ್ಕ್<br>ಸೂರ್ಯಶ್ರೀ, ಜೀವನ ನಗರ<br>ಎಲ್.ಐ.ಸಿ. ಕಾಲೊನಿ, ಉಡುಪಿ - 576 201<br>9448964554; 9241223400 | ಸುರೇಶ ನಿ. ಧಾರವಾಡಕರ<br>ಟೈಪ್ - 5 - 64<br>ರಾ.ಶಾ.ವಿ.ಕೆ. ವಸಾಹತು, ಶಕ್ತಿನಗರ - 584 170<br>ರಾಯಚೂರು ಜಿಲ್ಲೆ<br>9900776135; 9008437925 | ನಿಂಗದಹಳ್ಳಿ ಮಲ್ಲಿಕಾರ್ಜುನ<br>ಕೃಷಿ ಅಧಿಕಾರಿ<br>ಪ್ಲಾಟ್ ಸಂಖ್ಯೆ 113, ಎನ್.ಜಿ.ಓ ಕಾಲೋನಿ<br>ಹೊಸ ಜೇವರ್ಗಿ ರಸ್ತೆ, ಗುಲ್ಬರ್ಗ - 585 102<br>9980102727 |
| ದಿಲೀಪ ಕುಮಾರ ಮಸೂತಿ<br>ಕೃಷಿ ಅಧಿಕಾರಿ<br>ಎರಡನೇ ಅಡ್ಡರಸ್ತೆ<br>ಶಿವಾಜಿ ನಗರ, ಹಾವೇರಿ - 581 110<br>9964571705 | ರವಿಶಂಕರ್ ಟಿ.ವಿ.<br>ಬಿನ್ ದಿ. ವೀರಭದ್ರಯ್ಯ ಟಿ. ಪಿ.<br>'ಶ್ರೀ ಕಣಿವೆ ಮನೆ', ಅಂಚೆ: ತೋವಿನಕೆರೆ<br>ಕೊರಟಗೆರೆ ತಾಲೂಕು, ತುಮಕೂರು ಜಿಲ್ಲೆ<br>9964901461; 9740025559 | ಪ್ರಮೀಳಾ ಸಿ.ಕೆ.<br>ಎಫ್ 19 , ಸ್ನಾತಕೋತ್ತರ ವಿದ್ಯಾರ್ಥಿನಿಯರ ನಿಲಯ<br>ಕೃಷಿ ವಿಶ್ವವಿದ್ಯಾಲಯ, ಜಿ.ಕೆ.ವಿ.ಕೆ<br>ಬೆಂಗಳೂರು - 560 065<br>9945601640 |
| ಮೋಹನ್ ಕುಮಾರ್ ಸೋ.ಸೋ.<br>ಸಿ-99/2, ಈಶ್ವರ ಬಡಾವಣೆ, ಲಾಲಂದೇವನಹಳ್ಳಿ ರಸ್ತೆ<br>ಫಾತಿಮಾ ರೈಸ್ ಮಿಲ್ ಹಿಂಭಾಗ<br>ಕೆ.ಆರ್. ನಗರ, ಮೈಸೂರು ಜಿಲ್ಲೆ<br>9739416418; 08223265119 | ಸೋಮನಗೌಡ ವೆಂ. ದೊಡ್ಡಗೌಡ್ರ<br>ಸಾಕಿನ ನಲವಡಿ, ನವಲಗುಂದ ತಾಲೂಕು<br>ಧಾರವಾಡ ಜಿಲ್ಲೆ - 580 023<br>08380-226634; 9844625392;<br>9620162957 | ಸತ್ಯನಗೌಡ ಎಸ್. ಲಕ್ಕನಗೌಡರ್<br>ಅಂಚೆ: ರಾಮನಗುಳಿ<br>ಅಂಕೋಲ ತಾಲೂಕು<br>ಉತ್ತರ ಕನ್ನಡ ಜಿಲ್ಲೆ - 581 314<br>9480718206 |
| ಲಕ್ಷ್ಮಣ ಎಂ. ಹೊಸಮನಿ<br>ಉಮಾಶಂಕರ ನಿಲಯ<br>ಲಕ್ಷ್ಮಿ ಬಡಾವಣೆ, ಗೋಕಾಕ<br>ಬೆಳಗಾವಿ - 591 307<br>9448157743 | ನಿರಂಜನ ಎಂ. ಆರ್.<br>ಇ/ಮ ರುದ್ರಾರಾಧ್ಯ<br>ಅಂಚೆ: ಕಟ್ಟದಾಳ್, ಹೊಸದುರ್ಗ ತಾಲೂಕು<br>ಚಿತ್ರದುರ್ಗ ಜಿಲ್ಲೆ - 577 533<br>9482070755 | ರಾಮಚಂದ್ರ ಆರ್.<br>ಸಂಖ್ಯೆ. 372, ಸೀನಪ್ಪ ಕಟ್ಟಡ<br>ಅಳ್ಳಾಳಸಂದ್ರ, ಅಂಚೆ: ಜಿ.ಕೆ.ವಿ.ಕೆ<br>ಬೆಂಗಳೂರು - 560 065<br>9945525389 |
| ಜೋಸೆಫ್ ಪಿರೇರಾ<br>'ಮರಿಯಕೃಪಾ' ಮನೆ<br>ಅಂಚೆ: ಕೊಕ್ಕಡ<br>ಬೆಳ್ತಂಗಡಿ ತಾಲೂಕು, ದಕ್ಷಿಣ ಕನ್ನಡ - 574 198<br>9845658193 | ಸರವು ಸದಾನಂದ<br>ವಾರಣಾಶಿ ಕೃಷಿ ಸಂಶೋಧನಾ ಕೇಂದ್ರ<br>ಅಡ್ಯನಡ್ಕ, ಬಂಟ್ವಾಳ ತಾಲೂಕು,<br>ದಕ್ಷಿಣ ಕನ್ನಡ ಜಿಲ್ಲೆ - 574 260<br>08255-270533; 9946178264 | ರಶ್ಮಿ ಶಹಪುರಮಠ<br>ಕೃಷಿ ಅಧಿಕಾರಿ<br>ಕೃಷಿ ಅಧಿಕಾರಿಗಳು (ಮೆ.ಅ) ರವರ ಕಚೇರಿ<br>ಕೇಂದ್ರ ಸಂಚಾರಿ ಘಟಕ, ಧಾರವಾಡ<br>9844090342 |
| ಮಧುಮತಿ ದೇ. ಪಾಟೀಲ<br>ಕೃಷಿ ಅಧಿಕಾರಿ<br>ಬೀಜ ಪರೀಕ್ಷಾ ಪ್ರಯೋಗಾಲಯ<br>ಕೃಷಿ ಇಲಾಖೆ, ಧಾರವಾಡ<br>9448118509 | ಸುಬ್ರಾಯ ಮ. ಹೆಗಡೆ<br>'ಸೌರಭ'<br>ಅಂಚೆ: ಹಳವಳ್ಳಿ<br>ಅಂಕೋಲಾ ತಾಲೂಕು, ಉತ್ತರ ಕನ್ನಡ ಜಿಲ್ಲೆ<br>08388-276833 | ರಮಾ ಶ್ರೀಕಂಠ<br>916, ರಶ್ಮಿ ನಿಲಯ, 1ನೇ ಮುಖ್ಯ ರಸ್ತೆ,<br>11 ನೇ ಅಡ್ಡರಸ್ತೆ, ಗಿರಿನಗರ ಎರಡನೇ ಹಂತ<br>ಬೆಂಗಳೂರು - 560 085<br>9008475899 |
| ಸುನೀತಾ ಕುಸುಗಲ್ಲ<br>C/o ಬಿ.ವೈ. ಉಪ್ಪಾರ<br>ಮೂರನೇ ಅಡ್ಡರಸೆ, ಶ್ರೀನಗರ, ಹಳಿಯಾಳ ರಸ್ತೆ<br>ಧಾರವಾಡ - 580 003<br>9449973505 | ಬೈರಪ್ಪ ಎ.ಎಂ<br>ದ್ವಿತೀಯ ಎಂ. ಎಸ್ಸಿ(ಕೃಷಿ)<br>ಕೃಷಿ ಕೀಟಶಾಸ್ತ್ರ ವಿಭಾಗ, ಕೃಷಿ ವಿಶ್ವವಿದ್ಯಾಲಯ<br>ಜಿ.ಕೆ.ವಿಕೆ, ಬೆಂಗಳೂರು - 560 065<br>9844612763 | ದಿವ್ಯ ಎಂ.<br>ದ್ವಿತೀಯ ಎಂ. ಎಸ್ಸಿ(ಕೃಷಿ)<br>ಸೂಕ್ಷ್ಮಜೀವಿ ಶಾಸ್ತ್ರ ವಿಭಾಗ<br>ಕೃಷಿ ವಿಶ್ವವಿದ್ಯಾಲಯ, ಜಿ.ಕೆ.ವಿ.ಕೆ<br>ಬೆಂಗಳೂರು - 560 065 |
| ಬಿ. ವೆಂಕಟೇಶ, ಬೂಚನಹಳ್ಳಿ<br>ಅಂಚೆ: ಸಾಸಲು, ಗೂಳೂರು ಹೋಬಳಿ<br>ತುಮಕೂರು ತಾಲೂಕು ಮತ್ತು ಜಿಲ್ಲೆ<br>9945853902 | ಅಲ್ಲಪ್ಪ ಚನ್ನಬಸಪ್ಪಾ ಕುಂಬಾರ<br>ಅಂಚೆ: ಚಿನಿವಾಡ<br>ಹುಕ್ಕೇರಿ ತಾಲೂಕು, ಬೆಳಗಾವಿ ಜಿಲ್ಲೆ<br>9980676450 | ಬಿ.ಎನ್. ಮಂಜುನಾಥ್<br>ಸಂಖ್ಯೆ 15, ಎ.ಪಿ.ಎಮ್.ಸಿ ಯಾರ್ಡ್<br>ರಾಮನಗರ - 571 511<br>9945356502, 9341314085 |
| ಮೋಹನ್ ಟಿ. ಎಸ್.<br>ದೇವಿತಂದ್ರೆ<br>ಕೆ.ಆರ್. ನಗರ ತಾಲೂಕು,<br>ಮಿರ್ಲೆ ಹೋಬಳಿ, ಮೈಸೂರು ಜಿಲ್ಲೆ<br>9632658468 | ಅಂಗಣ್ಣ ಕೆ.ಇ<br>ಬಂದರಹಳ್ಳಿ, ಅಂಚೆ: ಹಳೇ ಉಪ್ಪಾರಹಳ್ಳಿ<br>ಹೊಸೂರು ಹೋಬಳಿ, ಗೌರಿಬಿದನೂರು ತಾಲೂಕು<br>ಚಿಕ್ಕಬಳ್ಳಾಪುರ ಜಿಲ್ಲೆ - 561 210<br>9342246564 | |



ಹಿಂದಿನ ಪುಟದಿಂದ

**ರೈಸೂ ಗೊತ್ತು, ಬೀನ್ಸೂ ಗೊತ್ತು, ಆದರೆ ರೈಸ್ ಬೀನ್ ಗೊತ್ತಾ?**
(1.08.2009)

**ಹಿತ್ತಲಿಗೆ ರೆಕ್ಕೆ ಅವರೆ**
(8.08.2009)

**ತುಪ್ಪದಷ್ಟೇ ರುಚಿ ಈ ಹೀರೇಕಾಯಿ**
(15.08.2009)

**ಕೈ ತೋಟದಲ್ಲಿ ಕ್ಯಾಪ್ಸಿಕಂ**
(22.08.2009)

**ಬುಟ್ಟಿಯಲ್ಲಿ ಬದನೆ ಕೃಷಿ**
(29.08.2009)



ಒಂದು ಹುಲ್ಲಿನ ಕ್ರಾಂತಿ
– ಮಸನೊಬು ಫುಕುವೊಕಾ
ಅನುವಾದ : ಸಂತೋಷ ಕೌಲಗಿ
ಬೆಲೆ : 100/– ರೂಪಾಯಿ
ಪ್ರಕಾಶನ : ಜನಪದ ಸೇವಾ ಟ್ರಸ್ಟ್
ಮೇಲುಕೋಟೆ
ಮಂಡ್ಯ ಜಿಲ್ಲೆ – 571 431

ಈಗಾಗಲೆ ಜನಪ್ರಿಯವಾಗಿರುವ 'ಒಂದು ಹುಲ್ಲಿನ ಕ್ರಾಂತಿ' ಪುಸ್ತಕದ ಪರಿಷ್ಕೃತ ಆವೃತ್ತಿ ಪ್ರಕಟಗೊಂಡಿದೆ. ಆಕರ್ಷಕ ಮುಖಪುಟ, ಫುಕುವೊಕಾ ಅವರ ಸಂದರ್ಶನ ಈ ಆವೃತ್ತಿಯ ವಿಶೇಷ.

## ಪವಾಡ ಧಾನ್ಯಗಳನ್ನು ಕುರಿತ ಲೇಖನಕ್ಕೆ 'ಮಿನಿ' ಬಹುಮಾನ



ಪವಾಡ ಧಾನ್ಯಗಳನ್ನು ಕುರಿತು ಕನ್ನಡದಲ್ಲಿ ಪ್ರಕಟವಾಗುವ ಕಾಮ್ ಬಳಗದವರ ಅತ್ಯುತ್ತಮ ಲೇಖನಕ್ಕೆ ಬಹುಮಾನ ನೀಡುವುದಾಗಿ ಹೈದರಾಬಾದ್‌ನ ಡೆಕ್ಕನ್ ಡೆವಲಪ್‌ಮೆಂಟ್ ಸೊಸೈಟಿಯ ನಿರ್ದೇಶಕ ಹಾಗೂ ಭಾರತೀಯ ಪವಾಡ ಧಾನ್ಯಗಳ ಜಾಲ – Millet Network of India - MINI('ಮಿನಿ')ದ ಸಂಚಾಲಕ ಪಿ.ವಿ. ಸತೀಶ್ ಪ್ರಕಟಿಸಿದ್ದಾರೆ. 2009ರ ನವೆಂಬರ್‌ನಿಂದ 2010ರ ಸೆಪ್ಟೆಂಬರ್ ಅವಧಿಯಲ್ಲಿ ಕನ್ನಡ ದಿನಪತ್ರಿಕೆ, ಕೃಷಿಪತ್ರಿಕೆ ಅಥವಾ ಯಾವುದೇ ನಿಯತಕಾಲಿಕದಲ್ಲಿ ಪ್ರಕಟಗೊಳ್ಳುವ ಲೇಖನಗಳನ್ನು ಬಹುಮಾನಕ್ಕಾಗಿ ಪರಿಗಣಿಸಲಾಗುವುದು. 2008ನೇ ಇಸವಿ ಜೂನ್ 5ರಂದು ಹೈದರಾಬಾದ್‌ನಲ್ಲಿ ಅಸ್ತಿತ್ವಕ್ಕೆ ಬಂದ 'ಮಿನಿ' ಇಂದು ದೇಶಾದ್ಯಂತ 12 ರಾಜ್ಯಗಳಲ್ಲಿ 90ಕ್ಕೂ ಹೆಚ್ಚು ಸದಸ್ಯರನ್ನು ಹೊಂದಿದೆ.

ನಮ್ಮ ಕೃಷಿರಂಗ ಎದುರಿಸುತ್ತಿರುವ ಅನೇಕ ಸಮಸ್ಯೆಗಳಿಗೆ ಸೂಕ್ತ ಪರಿಹಾರವಾಗಬಲ್ಲ, ಆಹಾರ ಮತ್ತು ಮೇವಿನ ಭದ್ರತೆ ಕಲ್ಪಿಸಬಲ್ಲ, ಅಪಾರ ಪೌಷ್ಟಿಕಾಂಶಗಳ ಆಗರವಾಗಿರುವ, ಆರೋಗ್ಯಕ್ಕೆ ಪೂರಕವಾಗಿರುವ, ಸಾವಿ, ನವಣೆ, ಸಜ್ಜೆ, ಅರ್ಕಾ, ಉದಲು, ಕೊರ್ಲು, ಬರಗ ಮೊದಲಾದ ಧಾನ್ಯಗಳಿಗೆ ಕಿರು ಧಾನ್ಯ ಅಥವಾ ಒರಟು ಧಾನ್ಯಗಳೆಂಬ ಹಣೆಪಟ್ಟಿ ಕಟ್ಟಿ ಇವನ್ನು ದೇಶದ ಆಹಾರಧಾನ್ಯಗಳ ಅಗ್ರ ಪಂಕ್ತಿಯಲ್ಲಿ ಪೂರ್ಣ ಕಡೆಗಣಿಸಲಾಗಿದೆ ಎನ್ನುವ 'ಮಿನಿ' ಇವನ್ನು ಪವಾಡ ಧಾನ್ಯಗಳೆಂದೇ ಕರೆಯುತ್ತಿದೆ; ಇವನ್ನು ಜನಪ್ರಿಯಗೊಳಿಸುವ ನಿಟ್ಟಿನಲ್ಲಿ ಕಾರ್ಯೋನ್ಮುಖವಾಗಿದೆ. ಈ ಹಿನ್ನೆಲೆಯಲ್ಲಿ ಪವಾಡ ಧಾನ್ಯಗಳ ಬಗ್ಗೆ ಕನ್ನಡದಲ್ಲಿ ಹೆಚ್ಚು ಲೇಖನಗಳು ಪ್ರಕಟಗೊಳ್ಳಬೇಕೆಂಬ ಆಶಯದೊಂದಿಗೆ 'ಮಿನಿ' ಬಹುಮಾನ ಯೋಜನೆ ಪ್ರಕಟಿಸಿದೆ. ಪವಾಡ ಧಾನ್ಯಗಳನ್ನು ಬೆಳೆಯುತ್ತಿರುವ ರೈತರ ಅನುಭವ, ಇವುಗಳ ಸಂಸ್ಕರಣಾ ವಿಧಾನಗಳು, ಆಹಾರ ವೈವಿಧ್ಯ, ಮೌಲ್ಯವರ್ಧನೆ ಪ್ರಯತ್ನಗಳು, ಪೌಷ್ಟಿಕಾಂಶ–ಔಷಧೀಯ ಗುಣಗಳು– ಇವೇ ಮುಂತಾದ ವಿಚಾರಗಳ ಬಗ್ಗೆ ಲೇಖನ ಬರೆಯಬಹುದು. ಹೆಚ್ಚಿನ ವಿವರಗಳಿಗೆ ಕೃಷಿ ಮಾಧ್ಯಮ ಕೇಂದ್ರವನ್ನು ಸಂಪರ್ಕಿಸಿ.

## ಕೃಷಿ ಮಾಧ್ಯಮ ಕೇಂದ್ರದ ಪ್ರಕಟಣೆಗಳು









- **ಊಟ ಭರ್ಜರಿ, ಆದರೆ ಹೊಟ್ಟೆ ಖಾಲಿ!**
  ಲೇ: ಶಿವರಾಂ ಪೈಲೂರು
  ಬೆಲೆ: 50 ರೂ.
- **ಹನಿಗೂಡಿ ಹಳ್ಳ**
  ಮಾಹಿತಿ ತುಣುಕುಗಳ ಸಂಗ್ರಹ
  ಬೆಲೆ: 30 ರೂ.
- **ಗುಡ್ಡದ ಮೇಲಿನ ಏಕವ್ಯಕ್ತಿ ಸೈನ್ಯ!**
  ಲೇ: ಶ್ರೀ ಪಡ್ರೆ
  ಬೆಲೆ: 15 ರೂ.
- **ಜಲನೆಮ್ಮದಿಯತ್ತ ಕಾಕೋಳ**
  ಲೇ: ಪೂರ್ಣಪ್ರಜ್ಞ ಬೇಳೂರು
  ಬೆಲೆ: 40 ರೂ.
- **ಕಲ್ಲು ಹಾಸಿನ ಮೇಲೆ ಹಸಿರು ಹೊದಿಕೆ**
  ಲೇ: ಆನಂದತೀರ್ಥ ಪ್ಯಾಟಿ
  ಬೆಲೆ: 15 ರೂ.
- **ಸಾವಯವ ತಾರಸಿ ತೋಟ**
  ಲೇ: ಅನುಸೂಯ ಶರ್ಮ
  ಬೆಲೆ: 30 ರೂ.
- **ಸಾವಯವ ಹಾದಿ**
  ಲೇ: ಈರಯ್ಯ ಕಿಲ್ಲೇದಾರ
  ಬೆಲೆ: 20 ರೂ.

**ಆಕರ್ಷಕ ವಿನ್ಯಾಸ, ಉಪಯುಕ್ತ ಮಾಹಿತಿ ಹಾಗೂ ಕೊಳ್ಳುಗಸ್ನೇಹಿ ಬೆಲೆ ಈ ಪುಸ್ತಕಗಳ ವಿಶೇಷ.**
**ಪುಸ್ತಕಗಳಿಗಾಗಿ ದೂರವಾಣಿ ಅಥವಾ ಈಮೇಲ್ ಮೂಲಕ ಕೇಂದ್ರವನ್ನು ಸಂಪರ್ಕಿಸಿ.**

**ಈ ಸಂಚಿಕೆಯ ಪ್ರಾಯೋಜಕರು :**
**ಆನಂದತೀರ್ಥ ಪ್ಯಾಟಿ, ಗುಲ್ಬರ್ಗ ಹಾಗೂ ಹರ್ಷವರ್ಧನ ವಿ. ಶೀಲವಂತ, ಧಾರವಾಡ**
ಮುಂದಿನ ಸಂಚಿಕೆಯ ಪ್ರಾಯೋಜಕರು: **ಗೋಪಿನಾಥ ಮಲ್ಯ ಮತ್ತು ಡಾ. ಪಿ. ಚಂದ್ರಶೇಖರ್**
ಕಾಮ್ ಹಿತೈಷಿಗಳು ಸಂಚಿಕೆಗಳನ್ನು ಪ್ರಾಯೋಜಿಸುವಂತೆ ವಿನಂತಿ. ಒಂದು ಸಂಚಿಕೆಯ ವೆಚ್ಚ 3 ಸಾವಿರ ರೂಪಾಯಿ.

**'ಕಾಮ್ ನ್ಯೂಸ್'** ಕೃಷಿ ಮಾಧ್ಯಮ ಕೇಂದ್ರದ ಪ್ರಕಟಣೆ. ಇದು ಖಾಸಗಿ ಪ್ರಸಾರಕ್ಕಾಗಿ ಮಾತ್ರ.
ಸಂಪಾದಕಿ: ಅನಿತಾ ಪೈಲೂರು, ವಿಳಾಸ: ಕೃಷಿ ಮಾಧ್ಯಮ ಕೇಂದ್ರ, #119, 1ನೇ ಮುಖ್ಯರಸ್ತೆ, 4ನೇ ಅಡ್ಡರಸ್ತೆ, ನಾರಾಯಣಪುರ, ಧಾರವಾಡ – 580 008
Email: agriculturalmedia@gmail.com ◆ Website: www.krushimadhyama.org ✆ : 0836-2444736; 9448410077
ವಿನ್ಯಾಸ: ಆರ್ಟೆಕ್, ಧಾರವಾಡ ◆ ಮುದ್ರಣ: ಆಕೃತಿ ಪ್ರಿಂಟ್ಸ್, ಮಂಗಳೂರು